ಸಂಪುಟ : 11 ಸಂಚಿಕೆ: 31 ಪುಟ : 4+2 ಬೆಲೆ: 3.00 ರವಿವಾರ ಮಾರ್ಚ್ 01 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYASAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 31 Pages : 4+2 Price : 3.00 Sunday March 01 2026 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಧರ್ಮಜಾಗೃತಿ ಸಭೆ, ಶೋಭಾಯಾತ್ರೆ ಇಂದು




■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಲಕ್ಷ್ಮೇಶ್ವರದ ಅಖಂಡ ಭಾರತ ಯುವಸೇನೆಯಿಂದ ಶಿವಾಜಿ ಮಹಾರಾಜ ಜಯಂತಿ ಅಂಗವಾಗಿ ಮಾರ್ಚ್ 1ರಂದು ಧರ್ಮಜಾಗೃತಿ ಸಭೆ ಮತ್ತು ಶೋಭಾಯಾತ್ರೆ ನಡೆಯಲಿದೆ.

ಬೆಳಿಗ್ಗೆ 10ಕ್ಕೆ ಪಟ್ಟಣದ ಪಂಪವೃತ್ತದಿಂದ ಪ್ರಮುಖ ಮಾರ್ಗದಲ್ಲಿ ಶಿವಾಜಿ ಮಹಾರಾಜರ ಮೂರ್ತಿಯೊಂದಿಗೆ ಶೋಭಾಯಾತ್ರೆ ನಡೆಯಲಿದೆ. ಸಂಜೆ 5ಕ್ಕೆ ಪಟ್ಟಣದ ಪರ್ವತ ಮಲ್ಲಯ್ಯ ದೇವಸ್ಥಾನದ ಹತ್ತಿರ ಧರ್ಮಜಾಗೃತಿ ಸಭೆ ನಡೆಯಲಿದೆ. ಬೆಳ್ಳಟ್ಟಿಯ ರಾಮಲಿಂಗೇಶ್ವರ ಮಠದ ಶ್ರೀ ಬಸವರಾಜ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ರಾಷ್ಟ್ರ ರಕ್ಷಣಾ ಪಡೆಯ ಸಂಸ್ಥಾಪಕ, ವಾಗ್ಮಿ ಪುನೀತ್ ಕೆರೆಹಳ್ಳಿ ದಿಕ್ಸೂಚಿ ಭಾಷಣ ಮಾಡುವರು. ಸುನೀಲ ಮಹಾಂತಶೆಟ್ಟರ, ಸಂಕಲ್ಪ ಜಗದೀಶ ಶೆಟ್ಟರ, ಶರಣು ಅಂಗಡಿ ಉಪಸ್ಥಿತಿತರಿರುವರು. ವಿವಿಧ ಕ್ಷೇತ್ರಗಳಲ್ಲಿನ ಸಾಧಕರನ್ನು ಸನ್ಮಾನಿಸಲಾಗುವುದು. ಹಿಂದೂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಸಂಘಟಕರು ತಿಳಿಸಿದ್ದಾರೆ.

## ಗುರು ವಂದನಾ, ಸನ್ಮಾನ ಕಾರ್ಯಕ್ರಮ ಇಂದು



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಶ್ರೀ ಉಮಾ ವಿದ್ಯಾಲಯ ಹೈಸ್ಕೂಲ್‌ನ ಶತಮಾನೋತ್ಸವ ಆಚರಿಸುವ ನಿಟ್ಟಿನಲ್ಲಿ ಹಳೆಯ ವಿದ್ಯಾರ್ಥಿಗಳು ಸಂಘಟಿತರಾಗಿ ಹಲವಾರು ವಿಧೇಯಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಅದರಲ್ಲಿ 1960ರ ನಂತರದ ವರ್ಷಗಳಲ್ಲಿ ಶಾಲೆಯಲ್ಲಿ ಅಭ್ಯಸಿಸಿರುವ ವಿದ್ಯಾರ್ಥಿಗಳು ಸಾವಿರಾರು ಸಂಖ್ಯೆಯಲ್ಲಿದ್ದು, ಒಂದೊಂದು ವರ್ಷದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಶತಮಾನೋತ್ಸವದ ವರ್ಷದ ನಿಮಿತ್ಯ ಹತ್ತು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬಂದಿದ್ದಾರೆ.

▸▸3ನೇ ಪುಟಕ್ಕೆ

## ಜ. ರೇಣುಕಾಚಾರ್ಯ ಜಯಂತಿ ಇಂದು



■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಭಾರತ ವೀರಶೈವ ಮಹಾಸಭಾ ಗದಗ ಜಿಲ್ಲಾ ಘಟಕದಿಂದ ಮಾರ್ಚ್ 1ರಂದು ಮುಂಜಾನೆ 9 ಗಂಟೆಗೆ ಗದುಗಿನ ವೀರಶೈವ ಜನರಲ್ ಲೈಬ್ರರಿ ಆವರಣದಲ್ಲಿರುವ ಮಹಾಸಭಾದ ಕಾರ್ಯಾಲಯದಲ್ಲಿ ಜ. ರೇಣುಕಾಚಾರ್ಯ ಜಯಂತಿಯನ್ನು ಆಚರಿಸಲಾಗುವದು.

ನಂತರ ಗದಗ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಡಳಿತದಿಂದ ಆಚರಿಸಲಾಗುವ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಹಾಗೂ ಸಂಜೆ 5 ಗಂಟೆಗೆ ನಗರದ ಮುಳಗುಂದ ನಾಕಾ ಬಳಿ ಇರುವ ರೇಣುಕ ಮಂದಿರದಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಮಹಾಸಭಾದ ಸರ್ವ ಪದಾಧಿಕಾರಿಗಳು, ಕಾರ್ಯಕಾರಿ ಮಂಡಳಿ ಸದಸ್ಯರು, ಆಜೀವ ಸದಸ್ಯರು, ಭಕ್ತಾಧಿಗಳು ಪಾಲ್ಗೊಳ್ಳಬೇಕೆಂದು ಮಹಾಸಭಾದ ಜಿಲ್ಲಾಧ್ಯಕ್ಷ ಶರಣಬಸಪ್ಪ ಗುಡಿಮನಿ ವಿನಂತಿಸಿದ್ದಾರೆ.

### ಜಿ.ಎಸ್.ಎಸ್ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಉದ್ಯೋಗ ಮೇಳಕ್ಕೆ ಚಾಲನೆ ನೀಡಿದ ಶಾಸಕ ಜಿ.ಎಸ್. ಪಾಟೀಲ

# ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಅಗತ್ಯವಿದೆ



ಗಜೇಂದ್ರಗಡವು ವೇಗವಾಗಿ ಬೆಳೆಯುತ್ತಿರುವ ನಗರವಾಗಿದ್ದು, ಗ್ರಾಮೀಣ ಪ್ರದೇಶದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಇಲ್ಲಿಗೆ ಬರುತ್ತಿದ್ದಾರೆ.

ಇಂತಹ ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳಗಳು ಉತ್ತಮ ವೇದಿಕೆಯಾಗಲಿವೆ ಎಂದು ಶಾಸಕ ಜಿ.ಎಸ್. ಪಾಟೀಲ ಅಭಿಪ್ರಾಯಪಟ್ಟರು.

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಜಾಗತೀಕರಣದ ಪರಿಣಾಮವಾಗಿ ಎಲ್ಲ ಕ್ಷೇತ್ರಗಳಲ್ಲೂ ಖಾಸಗಿ ಕಂಪನಿಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ, ವಿದ್ಯಾರ್ಥಿಗಳು ಉದ್ಯೋಗ ಗಿಟ್ಟಿಸಿಕೊಳ್ಳಲು ಶಿಸ್ತು, ಕೆಲಸದ ಬದ್ಧತೆ, ಕಠಿಣ ಪರಿಶ್ರಮ, ಉದ್ಯೋಗದ ಮೇಲಿನ ನಿಷ್ಠೆ ಹಾಗೂ ಪ್ರಾಮಾಣಿಕತೆ ಅನಿವಾರ್ಯ ಎಂದು ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಶನಿವಾರ ಗಜೇಂದ್ರಗಡ ಪಟ್ಟಣದ ಬಿ.ಎಸ್.ಎಸ್ ಸರ್ಕಾರಿ ಪ್ರಥಮದರ್ಜೆ ಕಾಲೇಜು ಆವರಣದಲ್ಲಿ ಉದ್ಯೋಗ ಭರವಸೆ ಕೋಶ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶದ ವತಿಯಿಂದ, ಎಂಎನ್‌ಸಿ ಕಂಪನಿಗಳ ಸಹಯೋಗದಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಹಾಗೂ ಪಟ್ಟಣ ಪ್ರದೇಶದ ನಿರುದ್ಯೋಗಿ ಯುವಕ-ಯುವತಿಯರಿಗೆ ಉದ್ಯೋಗ ಮೇಳಗಳು ಅತ್ಯಂತ ಉಪಯುಕ್ತವಾಗಿದ್ದು, ಇವುಗಳ ಮೂಲಕ ನೇರವಾಗಿ ಕಂಪನಿಗಳೊಂದಿಗೆ ಸಂಪರ್ಕ ಸಾಧಿಸಲು ಅವಕಾಶ ದೊರೆ-ಯುತ್ತದೆ. ಸಮಾಜದಲ್ಲಿ ಶೇ. 60ರಷ್ಟು ಮಂದಿ ಉದ್ಯೋಗ ಅರಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಅಗತ್ಯವಿದೆ. ಸ್ಪರ್ಧಾತ್ಮಕ ಯುಗದಲ್ಲಿ ಆರಂಭಿಕ ಸಂಬಳದ ಬಗ್ಗೆ ಚಿಂತಿಸದೆ ಉದ್ಯೋಗವನ್ನು ಸ್ವೀಕರಿಸಿ ಅನುಭವ ಸಂಪಾದಿಸಿಕೊಳ್ಳುವುದು ಮಹತ್ವದ್ದು ಎಂದು ಸಲಹೆ ನೀಡಿದರು.

ಮುಖಂಡ ಅಶೋಕ ಭಾಗಮಾರ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಉದ್ಯೋಗ ಮೇಳ ಆಯೋಜಿಸುವ ಮೂಲಕ ಯುವಜನತೆಗೆ ಉಜ್ವಲ ಭವಿಷ್ಯದ ದಾರಿ ತೋರಿಸಿರುವುದು ಶ್ಲಾಘನೀಯ ಕಾರ್ಯ ಎಂದರು.

ಈ ಸಂದರ್ಭದಲ್ಲಿ ಗಜೇಂದ್ರಗಡ ನಗರ ಕಾಂಗ್ರೆಸ್ ಅಧ್ಯಕ್ಷ ಶಿವರಾಜ ಘೋರ್ಪಡೆ, ಅಶೋಕ ಭಾಗಮಾರ, ವಿ.ಬಿ. ಸೋಮನಕಟ್ಟಿಮಠ, ಎಚ್. ಎಸ್. ಸೋಂಪೂರ, ಬಸವರಾಜ ನವಲಗುಂದ ಸೇರಿದಂತೆ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಮತ್ತು ಇತರರು ಉಪಸ್ಥಿತರಿದ್ದರು.

ಉದ್ಯೋಗ ಮೇಳದಲ್ಲಿ ವಿವಿಧ ಕಂಪನಿಗಳು ಭಾಗವಹಿಸಿ ಅಭ್ಯರ್ಥಿಗಳಿಂದ ಸಂದರ್ಶನ ನಡೆಸಿದವು.

### 119ನೇ ದಿನದ ಬಲ್ಡೋಟ ಹಟಾವೋ ಧರಣಿಗೆ ಸಾಹಿತಿ ಎ.ಬಿ. ಹಿರೇಮಠ ಬೆಂಬಲ

# ಜೀವವೇ ಹೋಗುವಾಗ ಇನ್ಯಾವ ಅಭಿವೃದ್ಧಿ?!

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಭಾಗ್ಯನಗರ ಬಂದ್ ಯಶಸ್ವಿಗೊಳಿಸಿದ ಎಲ್ಲರಿಗೂ ಕೃತಜ್ಞತಾ ಪತ್ರ ಬರೆದು ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ಅಭಿನಂದಿಸಿದೆ. ಜಂಟಿ ಕ್ರಿಯಾ ವೇದಿಕೆ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಅವರು ಕೃತಜ್ಞತೆ ಸಲ್ಲಿಸಿದರು.

ಇದೇ ವೇಳೆ 119ನೇ ದಿನದಂದು ಮುಂಡರಗಿ ನಿವಾಸಿ, ಹಿರಿಯ ಸಾಹಿತಿ ಎ.ಬಿ. ಹಿರೇಮಠ ಅವರು ಧರಣಿಗೆ ಬೆಂಬಲಿಸಿ ಮಾತನಾಡಿ, ಕಾರ್ಖಾನೆ ಕಟ್ಟಲು ಅಭಿವೃದ್ಧಿ ಹೆಸರೇಳುವುದು ನಾಚಿಕೆಗೇಡಿನ ಸಂಗತಿ. ಜೀವ ಹಾರಿ ಹೋಗುವಾಗ ಆರ್ಥಿಕ ಅಭಿವೃದ್ಧಿ ಎಂದರೆ ಏನರ್ಥ? ಜನರು ಇಷ್ಟೊಂದು ಕೆಟ್ಟ ಪರಿಸ್ಥಿತಿ ಎದುರಿಸಲಾಗದೆ ಪರಿತಪಿಸುವ ಚಿತ್ರಣ ರಾಜ್ಯದ ಜನ ನೋಡುತ್ತಿದ್ದಾರೆ. ಈಗಲಾದರೂ ಸರ್ಕಾರ ಕರುಣೆ ತೋರದೆ ಹೋದರೆ ಬಾಧಿತರು ಏನು ಮಾಡಬೇಕು ಎಂದು ಪ್ರಶ್ನಿಸಿದರು.




ಹೋರಾಟಕ್ಕೆ ಅಡೆತಡೆಗಳು ಎದುರಾದಾಗ ಸಹಾಯಕ್ಕೆ ಬಂದ ಜನಪ್ರತಿನಿಧಿಗಳಿಗೆ, ಹೋರಾಟ ಸಮಿತಿಯ ಬೆನ್ನೆಲುಬಾದ ನಿವೃತ್ತ ನೌಕರರು, ಹಿರಿಯ ಜೀವಗಳು, ಉತ್ಸಾಹದ ಚಿಲುಮೆಯಾದ ಮಹಿಳಾ ನಾಯಕಿಯರಿಗೆ ಮತ್ತು ಹಿರಿಯ ನಾಗರಿಕರಿಗೆ, ಗಾಂಧಿನಗರದ ಬಂಧುಗಳಿಗೆ, ಸ್ವಚ್ಛತೆಯ ಸೇವೆ ಮಾಡಿದ ಪುರಸಭೆಯ ಪೌರಾಯುಕ್ತರು ಮತ್ತು ಪೌರ ಸೇವಕರಿಗೆ, ಪ್ರತಿದಿನ ಧರಣಿ ಸತ್ಯಾಗ್ರಹದ ಶಿಬಿರ ಸ್ವಚ್ಛಗೊಳಿಸಿ, ಕುರ್ಚಿ ಹಾಕಿ ದಣಿವರಿಯದ ಸೇವೆ ಸಲ್ಲಿಸುತ್ತಿರುವ ಮಕ್ಬೂಲ್ ಸಾಬ್ ರಾಯಚೂರು ಅವರಿಗೆ, ಆಟೋ ಸಂಚಾರ ನಿಲ್ಲಿಸಿ ಸಹಕಾರ ನೀಡಿದ ಆಟೋ ಚಾಲಕರು, ಮಾಲೀಕರಿಗೆ, ಹಮಾಲಿ ಕೆಲಸ ಸ್ಥಗಿತ ಮಾಡಿದ, ಎಲ್ಲಾ ದುಡಿಯುವ ಹಮಾಲರುಗಳಿಗೆ, ಶ್ರಮಿಕರಾದ ಕಾರ್ಮಿಕರಿಗೆ, ರೈತರಿಗೆ ಹೋರಾಟ ಸಮಿತಿ ಋಣಿಯಾಗಿದೆ ಎಂದರು.

ಹೋರಾಟದ ಶಕ್ತಿ ಕುಂದದಂತೆ ನೋಡಿಕೊಳ್ಳುತ್ತಾ ಬಂದಿರುವ ಎಲ್ಲಾ ಪತ್ರಿಕಾ, ಟಿವಿ ಮಾಧ್ಯಮದವರಿಗೆ, ಪೊಲೀಸ್ ಮುಖ್ಯಾಧಿಕಾರಿಗಳು, ನಿರಂತರ ಹೋರಾಟ ಸಮಿತಿಯೊಂದಿಗೆ ಸಂಪರ್ಕ ಇಟ್ಟುಕೊಂಡು ನಿಭಾಯಿಸಿದ ರೀತಿ ಗಮನಾರ್ಹ. ಸಭೆ ಶಾಂತಿಯುತವಾಗಿ ನಡೆಯಲು ಸಹಕರಿಸಿದ ಪೊಲೀಸರಿಗೆ ಹೋರಾಟ ಸಮಿತಿ ಕೃತಜ್ಞವಾಗಿದೆ ಎಂದು ಎ.ಬಿ. ಹಿರೇಮಠ ತಿಳಿಸಿದರು.

119ನೇ ದಿನದ ಧರಣಿಯಲ್ಲಿ ಸಾಹಿತಿ ಎ.ಎಂ. ಮದರಿ, ಮುಂಡರಗಿಯ ಎ.ಕೆ. ಮುಲ್ಲಾನವರ, ವೀರೇಶ ಬ.ಕಟಗಾಲಿ, ನಿವೃತ್ತ ಇಂಜಿನಿಯರ್ ಡಿ.ವಿ. ಪಾಟೀಲ್, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ.ಗೊಂಡಬಾಳ, ಎನ್.ಕೆ.ಪಿ.ಎಂ ಶಾಲೆಯ ಸಂಸ್ಥಾಪಕ ಬಿ.ಕೆ. ಪಟ್ಟಣಶೆಟ್ಟಿ, ಪ್ರಕಾಶಕ ಡಿ.ಎಂ. ಬಡಿಗೇರ, ಮಹಾಂತೇಶ ಕೊತಬಾಳ, ಯಮನೂರಪ್ಪ ಹಳ್ಳಿಕೇರಿ, ರವಿ ಕಾಂತನವರ, ಬಿ.ಜಿ. ಕರಿಗಾರ, ಜಿ.ಬಿ. ಪಾಟೀಲ್, ಬೆಟ್ಟಪ್ಪ ಯತ್ನಟ್ಟಿ ಮೂಕಪ್ಪ ಮೇಸ್ತ್ರಿ ಬಸಾಪುರ ಇದ್ದರು.

## ಮಾ. 11ರಿಂದ ಸರ್ಕಾರಿ ವೈದ್ಯಾಧಿಕಾರಿ-ನೌಕರರ ಅನಿರ್ದಿಷ್ಟಾವಧಿ ಮುಷ್ಕರ: ಮಲ್ಲಿಕಾರ್ಜುನ



■ವಿಜಯಸಾಕ್ಷಿ ಸುದ್ದಿ, ಗದಗ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಮಾರ್ಚ್ 11ರಿಂದ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಎಚ್ಚರಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಇಲಾಖೆಯ ಪ್ರಮುಖ ಬೇಡಿಕೆಗಳನ್ನು ಹಲವು ಬಾರಿ ಸರ್ಕಾರದ ಗಮನಕ್ಕೆ ತರಲಾಗಿದೆ. ಆದಾಗ್ಯೂ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಹೋರಾಟದ ಮಾರ್ಗ ಹಿಡಿಯಲಾಗಿದೆ ಎಂದು ತಿಳಿಸಿದರು.

**ಪ್ರಮುಖ ಬೇಡಿಕೆಗಳು**

*ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕ ಔಷಧಿಗಳ ಸರಬರಾಜು

*ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ತಿದ್ದುಪಡಿ

*ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಯನ್ನು ನಿಯಮಿತವಾಗಿ ಪ್ರಕಟಣೆ

*ಅರ್ಹ ಅಧಿಕಾರಿ-ನೌಕರರಿಗೆ ಮುಂಬಡ್ತಿ ನೀಡುವುದು ಸೇರಿದಂತೆ ಇತರ ಆಡಳಿತಾತ್ಮಕ ಸಮಸ್ಯೆಗಳ ಪರಿಹಾರ

ಮೊದಲ ಹಂತದಲ್ಲಿ ಮಾರ್ಚ್ 11ರಿಂದ 15ರವರೆಗೆ ರಾಜ್ಯದ ಜಿಲ್ಲಾ ಹಾಗೂ ತಾಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಹಾಗೂ ನೌಕರರು ಕಪ್ಪುಪಟ್ಟಿ ಧರಿಸಿ ಹೊರರೋಗಿಗಳ ಚಿಕಿತ್ಸೆಯನ್ನು ಸ್ಥಗಿತಗೊಳಿಸಿ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ.

ಈ ಅವಧಿಯಲ್ಲಿ ಸರ್ಕಾರದಿಂದ ಸ್ಪಷ್ಟ ನಿರ್ಧಾರ ಹೊರಬರದಿದ್ದರೆ, ಮಾರ್ಚ್ 16ರಿಂದ ▸▸3ನೇ ಪುಟಕ್ಕೆ

## ಗ್ರಾಮೀಣರಿಗೆ ಆರೋಗ್ಯ ಸೇವೆ; ವೈದ್ಯರ ಪಾತ್ರ ಶ್ರೇಷ್ಠ - ಶಾಸಕ ಜಿ.ಎಸ್.ಪಾಟೀಲ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಗ್ರಾಮೀಣ ಭಾಗದ ಜನರಿಗೆ ಸಕಾಲದಲ್ಲಿ ಮತ್ತು ಸಮರ್ಪಕ ಆರೋಗ್ಯ ಸೇವೆ ಒದಗಿಸಲು ವೈದ್ಯರು ಪ್ರಮುಖ ಪಾತ್ರ ವಹಿಸುತ್ತಾರೆ. ಅವರ ಶ್ರಮ ಶ್ಲಾಘನೀಯ ಎಂದು ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಅವರು ಶನಿವಾರ ತಾಲೂಕಿನ ಕೊಡಗಾನೂರ ಗ್ರಾಮದಲ್ಲಿ ಆಯುಷ್ಮಾನ್ ಯೋಜನೆಯ ರೂ.61 ಲಕ್ಷ ಅನುದಾನದಲ್ಲಿ ನಿರ್ಮಿತವಾದ ಆರೋಗ್ಯ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು.

ಬಡಜನರು ಸರ್ಕಾರಿ ಆಸ್ಪತ್ರೆಗೆ ಬಂದಾಗ ಅವರಿಗೆ ಅಗತ್ಯ ಹಾಗೂ ಸೂಕ್ತ ಚಿಕಿತ್ಸೆ ದೊರಕಬೇಕು. ಈ ನಿಟ್ಟಿನಲ್ಲಿ ವೈದ್ಯಾಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ಸೂಚಿಸಿದರು. ಗ್ರಾಮೀಣ ಪ್ರದೇಶದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆಗಳು ಸಿಗುವಂತೆ ಮಾಡುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದೆ ಎಂದರು.

ಆಯುಷ್ಮಾನ್ ಆರೋಗ್ಯ ಮಂದಿರದ ಮೂಲಕ ಸಾಮಾನ್ಯ ತಪಾಸಣೆ, ತಾಯಿ-ಮಗು ಆರೈಕೆ, ರಕ್ತದೊತ್ತಡ ಹಾಗೂ ▸▸2ನೇ ಪುಟಕ್ಕೆ



### 1012 ಕುಂಭೋತ್ಸವ ಮೆರವಣಿಗೆ, ಸರ್ವಧರ್ಮ ಸಾಮೂಹಿಕ ವಿವಾಹ

## ಮಾ.3ರಂದು ಪುಟ್ಟರಾಜ ಗವಾಯಿಗಳ 112ನೇ ಜಯಂತ್ಯುತ್ಸವ

■ವಿಜಯಸಾಕ್ಷಿ ಸುದ್ದಿ, ಗದಗ

ಡಾ. ಪಂಡಿತ ಪುಟ್ಟರಾಜ ಕವಿಗವಾಯಿಗಳು ಅವರ 112ನೇ ಜಯಂತ್ಯುತ್ಸವವನ್ನು ಮಾರ್ಚ್ 3ರಂದು ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಕೆ.ಎಚ್. ಪಾಟೀಲ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿರುವ ಈ ಕಾರ್ಯಕ್ರಮದ ಅಂಗವಾಗಿ ಸರ್ವಧರ್ಮ ಸಾಮೂಹಿಕ ವಿವಾಹ ನಡೆಯಲಿದೆ ಎಂದು ದಿ.ಕೆ ಎಚ್ ಪಾಟೀಲ್ ಅಭಿಮಾನಿಗಳ ಸಂಘದ ಅಧ್ಯಕ್ಷ ಪೀರಸಾಬ ಕೌತಾಳ ತಿಳಿಸಿದ್ದಾರೆ.

ಶನಿವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರ್ಚ್ 3ರಂದು ಬೆಳಿಗ್ಗೆ 9 ಗಂಟೆಗೆ ನಗರದ ಪ್ರಮುಖ ಬೀದಿಗಳಲ್ಲಿ 1012 ಕುಂಭೋತ್ಸವದೊಂದಿಗೆ ಭವ್ಯ ಮೆರವಣಿಗೆ ಜರುಗಲಿದೆ. ನಂತರ ಮಧ್ಯಾಹ್ನ 12.30ಕ್ಕೆ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು.



ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಡಾ. ತೋಂಟದ ಸಿದ್ದರಾಮ ಮಹಾಸ್ವಾಮಿಗಳು, ಅಭಿನವ ಕಾಡಸಿದ್ದೇಶ್ವರ ಸ್ವಾಮಿಗಳು ಹಾಗೂ ಶಿವಕುಮಾರ ಮಹಾಸ್ವಾಮಿಗಳು ಸೇರಿದಂತೆ ವಿವಿಧ ಮಠಾಧೀಶರು ವಹಿಸಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಶಾಸಕ ಡಿ. ಆರ್. ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಆನಂದಸ್ವಾಮಿ ಗಡ್ಡದೇವರಮಠ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ಇದೇ ವೇಳೆ ಮಾರ್ಚ್ 2ರಂದು ಸಂಜೆ 6.30ಕ್ಕೆ ಸಾಂಸ್ಕೃತಿಕ ರಸಮಂಜರಿ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಸತ್ಕಾರ ಸಮಾರಂಭ ಏರ್ಪಡಿಸಲಾಗಿದೆ. ಪುಟ್ಟರಾಜ ಗವಾಯಿಗಳ ಭಕ್ತರು ಹಾಗೂ ಕೆ.ಎಚ್. ಪಾಟೀಲ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪೀರಸಾಬ ಕೌತಾಳ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ರಮೇಶ್ ಮುಳಗುಂದ, ಆನಂದ ಸಾಲಿಗ್ರಾಮ, ಚಂದ್ರು ಕಡಕೊಳ, ದಾವಲಸಾಬ ಇರಕಲ್, ವಿನೋದ್ ಶಿದ್ಲಿಂಗ ಸೇರಿದಂತೆ ಅನೇಕರಿದ್ದರು.

# ಕ್ವಿಂಟಲ್‌ಗೆ 4,886 ಬೆಂಬಲ ಬೆಲೆ: ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ



■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಹಗರಿಬೊಮ್ಮನಹಳ್ಳಿ ಪಟ್ಟಣದ ಎಪಿಎಂಸಿ ಆವರಣದಲ್ಲಿ ರೈತರ ಮುಂಗಾರು ಹಂಗಾಮಿನ ರಾಗಿ ಬೆಳೆಗೆ ಬೆಂಬಲ ಬೆಲೆ ಖರೀದಿ ಕೇಂದ್ರಕ್ಕೆ ಶಾಸಕ ಕೆ. ನೇಮಿರಾಜ ನಾಯ್ಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮುಂಗಾರು ಹಂಗಾಮಿನಲ್ಲಿ ಬೆಳೆದ ರಾಗಿಯನ್ನು ಕ್ವಿಂಟಲ್‌ಗೆ 4,886 ನಂತೆ ಖರೀದಿಸಲಾಗುವುದು. ಒಬ್ಬ ರೈತರಿಂದ ಗರಿಷ್ಠ 10 ಕ್ವಿಂಟಲ್‌ವರೆಗೆ ಖರೀದಿಸಲಾಗುತ್ತದೆ ಎಂದು ತಿಳಿಸಿದರು.

ತೂಕದ ವಿಚಾರದಲ್ಲಿ ರೈತರಿಗೆ ಯಾವುದೇ ಅನ್ಯಾಯವಾಗದಂತೆ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಸೂಚಿಸಿದ ಅವರು, ಹಿಂಗಾರು ಹಂಗಾಮಿನ ರಾಗಿಗೂ ಖರೀದಿ ಕೇಂದ್ರ ತೆರೆಯುವಂತೆ ಸರ್ಕಾರವನ್ನು ಒತ್ತಾಯಿಸುವುದಾಗಿ ಹೇಳಿದರು. ಖರೀದಿಸಿದ ಧಾನ್ಯದ ಹಣವನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು. ಪ್ರತಿದಿನ ಟೋಕನ್ ವ್ಯವಸ್ಥೆ ಮೂಲಕ ರೈತರನ್ನು ಕರೆಸುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಬಾದಾಮಿ ಮೃತ್ಯುಂಜಯ (ಮುತ್ತಣ್ಣ), ತಾಲೂಕು ಅಧ್ಯಕ್ಷ ವೈ. ಮಲ್ಲಿಕಾರ್ಜುನ್, ಜಿಲ್ಲಾ ಉಪಾಧ್ಯಕ್ಷ ನಾಣ್ಯಪುರ ಕೃಷ್ಣಮೂರ್ತಿ ಶೆಟ್ರು, ಕಿನ್ನಾಳ ಸುಭಾಷ್, ಮೈನಹಳ್ಳಿ ಕೊಟ್ರೇಶ್ ಬನ್ನಿಗೋಳ, ಐಟಿ ಕೊಟ್ರೇಶ್, ವಿಎಸ್ ಎಸ್ ಎನ್ ಅಧ್ಯಕ್ಷ ವಿನಾಯಕ, ಕಾರ್ಯದರ್ಶಿ ಬಸವರಾಜ, ಆಹಾರ ನಿರೀಕ್ಷಕರಾದ ಮಮತಾ ಹಿರೇಮಠ, ಎಪಿಎಮ್‌ಸಿ ಕಾರ್ಯದರ್ಶಿ ಎನ್ ಶೈಲಾ, ಸಹಕಾರ ಶ್ರೀ ಮಂಜುನಾಥ್ ಹಾಗೂ ಇತರರು ಇದ್ದರು.

## ಗುರುವಂದನೆ, ಸ್ನೇಹ ಸಮ್ಮಿಲನ ಕಾರ್ಯಕ್ರಮ ಮಾಡುವವರಿಗೆ ಸ್ಫೂರ್ತಿಯಾಗುವ 'ಸ್ಥಿತಪ್ರಜ್ಞೆ' ಪುಸ್ತಕ

# ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ


ಇತ್ತೀಚಿನ ದಿನಗಳಲ್ಲಿ ಅಕ್ಷರದ ಶ್ರೀರಕ್ಷೆಯನಿತ್ತು ಬದುಕಿಗೆ ಜ್ಞಾನದ ಬೆಳಕನ್ನು ನೀಡಿದ ಪೂಜ್ಯ ಗುರುಗಳ ಗುರುವಂದನೆ, ಸ್ನೇಹ ಸಮ್ಮಿಲನ ಕಾರ್ಯಕ್ರಮ ಮಾಡುತ್ತಾ ಇರುವುದನ್ನು ನೋಡುತ್ತಿದ್ದೇವೆ. ಕೇವಲ ಗುರುವಂದನೆ ಮಾಡಿ ಮುಗಿಸಿದರೆ ಸಾಕೇ?! ಕಾರ್ಯಕ್ರಮ ಅಂದುಕೊಂಡಂತೆ ಚೆನ್ನಾಗಿ ಆಯ್ತು ಅಂದ್ರೆ ಮುಗಿಯಿತೆ? ಸ್ನೇಹಿತರೆಲ್ಲರೂ ಸೇರಿ ಬಾಲ್ಯದ ನೆನಪಿನ ಬುತ್ತಿಯನ್ನು ಬಿಚ್ಚಿ, ನಕ್ಕು ನಲಿದು ಸಂಭ್ರಮಿಸಿದರೆ ಆಯ್ತೆ? ಖಂಡಿತ ಇಲ್ಲ. ಇವೆಲ್ಲದರ ನಡುವೆ ಬಹಳಷ್ಟು ವಿಶೇಷ, ವಿನೂತನವಾದ ಕಾರ್ಯಕ್ಕೆ ಕೈ ಹಾಕಿರುವುದು, ಮನಸ್ಸು ಮಾಡಿರುವುದು ಶ್ಲಾಘನೀಯವಾದುದು.

ಸರ್ವರಿಗೂ ಮಾದರಿಯಾಗುವ ಯೋಚನೆ ಮತ್ತು ಯೋಜನೆಯನ್ನು ರೂಪಿಸಿಕೊಂಡು ಎಂ.ಎಸ್. ಮಕಾನದಾರ ಹಾಗೂ ಕಮಲಾ ಸಿ. ತಡಸದ ಅವರ ಸಂಪಾದಕತ್ವದಲ್ಲಿ 'ಸ್ಥಿತಪ್ರಜ್ಞೆ' ಎಂಬ ಶೀರ್ಷಿಕೆಯ ಅಡಿಯಲ್ಲಿ ಸ್ನೇಹಿತರ ವಿಚಾರಗಳ ಹೂರಣಕ್ಕೆ ವಿಭಿನ್ನ ಲೇಖನಗಳು, ಕವನಗಳು, ಚಿತ್ರಪಟಗಳು, ಸ್ನೇಹಿತರ ವಿಳಾಸ, ಸಂಪರ್ಕ ಸಂಖ್ಯೆಗಳು, ಗುರು ಶ್ರೇಷ್ಠರ ಪರಿಚಯ, ಕಾರ್ಯಕ್ರಮದ ಪತ್ರಿಕಾ ವರದಿಗಳು ಒಳಗೊಂಡಂತೆ ಸಾಹಿತ್ಯದ ಅಮೂಲ್ಯ ರತ್ನವು ಪುಸ್ತಕದ ರೂಪದಲ್ಲಿ ಸಾಹಿತ್ಯ ಲೋಕಕ್ಕೆ ಅರ್ಪಿಸಲು ಸನ್ನದ್ಧವಾಗಿದೆ.

1988–89ನೇ ಸಾಲಿನ SSLC ವಿದ್ಯಾರ್ಥಿಗಳು ಮೂರು ದಶಕಗಳ ಬಳಿಕವೂ ಗುರು ಸ್ಮರಣೆ ಮಾಡುವ ಮೂಲಕ ಶಿಷ್ಯ ವೃಂದದವರು ಸೇರಿ ಪೂಜ್ಯ ಭಾವನೆಯಿಂದ ಗುರು ವಂದನೆಯ ಜೊತೆಗೆ ಸ್ನೇಹ ಸಮ್ಮಿಲನದ ನೆಪದಿಂದ ಸಾಕಷ್ಟು ವರ್ಷಗಳ ಬಳಿಕ ಉದ್ಯೋಗದ ನಿಮಿತ್ತ ಮತ್ತು ಬೇರೆ ಬೇರೆ ಕಾರಣಗಳಿಂದ ದೂರದ ಊರುಗಳಲ್ಲಿನ ಸ್ನೇಹಿತರನ್ನು ಸಂಪರ್ಕಿಸಿ, ಗೆಳೆಯರೆಲ್ಲ ಸೇರಿ ಬಾಲ್ಯದ ತುಂಟಾಟಗಳ ಸವಿನೆನಪುಗಳನ್ನು ಸ್ಮೃತಿ ಪಟಲದಿಂದ ನೆನಪಿನ ಅಂಗಳಕ್ಕೆ ತಂದುಕೊಂಡು ಸಾಹಿತ್ಯದ ರೂಪದಲ್ಲಿ ಅನಾವರಣಗೊಳಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ.

"ಸ್ಥಿತಪ್ರಜ್ಞೆ"ಯ ಒಳಗೆ ಏನೆಲ್ಲ ಇದೆ ಎನ್ನುವುದನ್ನು ಪರಾಮರ್ಶಿಸಿದಾಗ ಮೊದಲು ನಮ್ಮ ಕಣ್ಣಿಗೆ ಗೋಚರವಾಗುವ ಅದ್ಭುತ ವಿಚಾರಗಳಿಂದ ಕೂಡಿದ ಭಾಗ–1ರಲ್ಲಿನ ಜಾಗೃತ ಲೇಖನಗಳು. ಡಾ. ಲಲಿತಾ ಕೆ. ಹೊಸಪ್ಯಾಟಿ ಅವರು ಬರೆದ "ಸ್ಥಿತಪ್ರಜ್ಞೆ" ಲೇಖನದಲ್ಲಿ ಮನುಷ್ಯನು ಜೀವನದಲ್ಲಿ ಅತಿಯಾಗಿ ಆಸೆ ಪಡುವುದಕ್ಕಿಂತ ಇದ್ದುದರಲ್ಲಿಯೇ ತೃಪ್ತನಾಗಿರಬೇಕು ಅನ್ನುವುದನ್ನು ಮನೋಜ್ಞವಾಗಿ ಬಿಂಬಿಸಿದ್ದಾರೆ.

ಓಂಕಾರಸಾ ಕಾಟವಾ ಅವರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆ, ಅಶೋಕ ಚಲಕಾ ಅವರ ತೃತೀಯ ಲಿಂಗಿಗಳ ಜೀವನ ಮತ್ತು ಸಾಧನೆ, ರಾಜಶೇಖರ್ ಪಟ್ಟೇದ ಅವರ ಸುಸ್ಥಿರ ಅಭಿವೃದ್ಧಿಯಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ, ಕಮಲಾ ತಡಸದ ಅವರ ಪತ್ರಿಕಾ ಮಾಧ್ಯಮ, ಜಯಶ್ರೀ ಕಾಟವಾ ಅವರ ಹಾಗೇನಿಲ್ಲ ಏಕೆ ಸಂಕೋಚ ಪಡುತ್ತೀರಿ?, ಎಂ.ಎಸ್. ಮಕಾನದಾರ ಅವರ ಉಚಿತ ಕೊಡುಗೆ ಔಚಿತ್ಯವೇ? ಮಹಮ್ಮದ್ ರಫಿ ಅರಗಿದ್ದಿ ಅವರ ನನ್ನ ಜೀವನದ ಹಾದಿ, ಹಂಪಮ್ಮ ಕುಷ್ಟಗಿ ಅವರ ತಾಯಿ, ಇಡೀ ಸಮಾಜವನ್ನು




ಮನುಕುಲವನ್ನು ಜಾಗೃತಿಗೊಳಿಸುವ ಸಾಕಷ್ಟು ವಿಚಾರಗಳ ಸವಿ ಹೂರಣವನ್ನು ಉಣಬಡಿಸುತ್ತವೆ.

ಶಿಕ್ಷಣದ ಮಹತ್ವ ಕುರಿತು ಭಾಗ–2ರಲ್ಲಿ ಶೈಕ್ಷಣಿಕ ಲೇಖನಗಳು ಮೂಡಿಬಂದಿವೆ. ಡಾ. ಬಿ.ಬಿ. ಪೊಲೀಸ್‌ಪಾಟೀಲ ಅವರ ಪ್ರಸ್ತುತ ದಿನಗಳಲ್ಲಿ ರವೀಂದ್ರನಾಥ್ ಟ್ಯಾಗೋರರ ಶಿಕ್ಷಣ ನೀತಿ, ಡಾ. ನಾಮದೇವ ಹೆಬ್ಬಾರೆ ಅವರ ರಕ್ತದಾನ ಶ್ರೇಷ್ಠದಾನ, ಪಂಪಾಪತಿ ಜೂಜನಿ ಅವರ ಶಿಕ್ಷಣ ಅಂದು – ಇಂದು, ಕಮಲಾ ತಡಸದ ಅವರ ಬಳ್ಳಿಗೆ ಕಾಯಿ ಭಾರವೇ, ಬಸವರಾಜ ಅಣ್ಣಿಗೇರಿ ಅವರ ಮನೆಯೇ ಮೊದಲ ಪಾಠ ಶಾಲೆ, ಬಸವರಾಜ ಕೊಟಗಿ ಅವರ ಕ್ರೀಡೆ ಮತ್ತು ಶಿಕ್ಷಣ, ಭಾರ್ಗವ ಅವರ ಪ್ರಾಚೀನ ಭಾರತದ ವಿಶ್ವವಿದ್ಯಾಲಯಗಳು, ಡಾ. ವಿ.ಎಂ. ಕಾತರಕಿ ಅವರ ಆಯುರ್ವೇದದ ಅಗತ್ಯತೆ, ಎಂ.ಎಸ್. ಮಕಾನದಾರ ಅವರ ಅನುದಿನವು ನೆನೆಯುವೆ ಗುರುವನ್ನು, ಸಂದೀಪಾ ಭಾಗಮಾರ ಅವರ ಶಿಕ್ಷಕರು ವಿದ್ಯಾರ್ಥಿಗಳ ಸೇತುವೆ.

ಗಜೇಂದ್ರಗಡ ಪಟ್ಟಣದ ಐತಿಹಾಸಿಕ ಹಿನ್ನೆಲೆಯನ್ನುಳ್ಳ ಮಹತ್ವದ ವಿಚಾರಗಳಿಂದ ಕೂಡಿದ ಭಾಗ–3ರಲ್ಲಿನ ಐತಿಹಾಸಿಕ ಲೇಖನಗಳಲ್ಲಿ ಸಿ.ಎಸ್. ಮೂರಶಿಳ್ಳಿನ ಅವರ ಗಜೇಂದ್ರಗಡ ವಿದ್ಯಾವರ್ಧಕ ಸಂಘ, ಪ್ರಸನ್ನ ತೈಲಂಗ ಅವರ ನನ್ನ ಗಜೇಂದ್ರಗಡ, ಸುಭಾಸ ಚೆನ್ನಿ ಅವರ ಗಜೇಂದ್ರಗಡ ಪ್ರಥಮಗಳು, ರಾಜಶೇಖರ ಪಟ್ಟೇದ ಅವರ ಒಂದಾದ ಮನಸುಗಳ ಹೃದಯದ ಮಾತು, ಕಮಲಾ ತಡಸದ ಅವರ ಅವಿಸ್ಮರಣೀಯ ದಿನ, ಶ್ರೀಕಾಂತ ಶಾಬಾದಿ ಅವರ ಜವಳಿ ಉದ್ಯಮ, ನೀಲಕಂಠ ಸವಣೂರ ಅವರ ಸ್ವಾತಂತ್ರ್ಯ ಹೋರಾಟದಲ್ಲಿ ರೋಣ ತಾಲೂಕಿನ ಪಾತ್ರ, ವಾಣಿ ಕೆರಕಲಮಟ್ಟಿ ಅವರ ನೇಕಾರಿಕೆ, ಕೆ.ಎಸ್. ಗಾರವಾಡಹಿರೇಮಠ ಅವರ ನಾ ಕಂಡಂತೆ ಗಜೇಂದ್ರಗಡದ ಕ್ರೀಡಾ ಪ್ರತಿಭೆಗಳು, ರಾಧಾ ಚವ್ಹಾಣ ಅವರ ಬಾಲ್ಯದ ನೆನಪು, ಯಲ್ಲಪ್ಪ ಕಟ್ಟಿ ಅವರ ನೆನಪಿನ ಬುತ್ತಿ, ಬಸಯ್ಯ ಸಾಲಿಮಠ ಅವರ ನನ್ನಪ್ಪನಿಗೆ ನನಗೆ ದಾರಿ ತೋರಿದ ಎಸ್.ಎಂ.ಬಿ. ಇವೆಲ್ಲಾ ಲೇಖನಗಳು ಗಜೇಂದ್ರಗಡದ ವೈಶಿಷ್ಟ್ಯಗಳೊಂದಿಗೆ ಸಾಕಷ್ಟು ವಿಚಾರಗಳನ್ನು ದಾಖಲಿಸಿದ್ದಾರೆ. ನಾವು ಕೇವಲ ಗದ್ಯ ಸಾಹಿತ್ಯಕ್ಕೆ ಮಾತ್ರ ಸೀಮಿತವಲ್ಲ, ನಮ್ಮ ವಿಚಾರಗಳನ್ನು ಪದ್ಯ ರೂಪದಲ್ಲಿಯೂ ಕಟ್ಟಿ ಕೊಡಬಲ್ಲೆವು ಎನ್ನುವುದಕ್ಕೆ ಸಾಕ್ಷಿಯಾದಂತೆ ನಿಲ್ಲುವ ಭಾಗ–4ರಲ್ಲಿನ ಕವನಗಳು. ಕಮಲಾ ತಡಸದ ಅವರ ನನ್ನ ಶಾಲೆ, ಯಲ್ಲಪ್ಪ ಕಟ್ಟಿ ಅವರ ತಪ್ಪು, ಹನುಮಂತ ಕೆಂಚಿ ಅವರ ಚುಟುಕುಗಳು, ಸ್ವಾರಸ್ಯಪೂರ್ಣವಾಗಿ ರಚನೆಯಾಗಿದ್ದು, ಓದುಗರನ್ನು ತಾರ್ಕಿಕ ಚಿಂತನೆಗೆ ಹಚ್ಚಿ, ತಡೆದು ನಿಲ್ಲಿಸಿ, ವಿಚಾರ ಮಾಡುವ ಓರೆಗೆ ಹಚ್ಚುವ ಪ್ರಯತ್ನ ಮಾಡಿದ್ದಾರೆ.

ಈ ಎಲ್ಲಾ ಲೇಖನಗಳು ಹಾಗೂ ಕವನಗಳನ್ನು ಓದಿದಾಗ ನನಗನಿಸಿದ್ದು, ಇವರೆಲ್ಲ ಮೂಲತಃ ಹವ್ಯಾಸಿ ಬರಹಗಾರರು, ಲೇಖಕರು ಇರಬೇಕು ಎಂದೆನಿಸಿದರಲ್ಲಿ ಸಂಶಯವೆನಿಸಲಿಲ್ಲ. ಅವರೆಲ್ಲರ ಪದ ಬಳಕೆ, ವಾಕ್ಯ ಜೋಡಣೆ ಓದುವವರನ್ನು ತನ್ಮಯಗೊಳಿಸುತ್ತವೆ. ಬರೀ ಗುರು ವಂದನೆ ಸಲ್ಲಿಸಿ ನೇಪಥ್ಯಕ್ಕೆ ಸರಿಯದೆ ಅದೊಂದು ಅದ್ಭುತವಾದ ದಾಖಲೆಯಾಗುವ ಮೂಲಕ ಸಾಹಿತ್ಯದ ಲೋಕದಲ್ಲಿ ಮಿನುಗುವ ಧ್ರುವ ತಾರೆಯಂತೆ ಸುವರ್ಣ ಅಕ್ಷರಗಳಲ್ಲಿ ಬರೆಯುವಂತೆ ಮೂಡಿಬಂದಿದೆ.

ಅಕ್ಷರ ಕಲಿಸಿದ ಗುರುಗಳ ಸಂಕ್ಷಿಪ್ತ ಪರಿಚಯದ ಜೊತೆಗೆ ಎಲ್ಲಾ ಸ್ನೇಹಿತರ ವಿಳಾಸ ಹಾಗೂ ಸಂಪರ್ಕ ಸಂಖ್ಯೆಗಳು ಸ್ನೇಹಿತರ ಬಾಂಡ್ ಅನ್ನು ಮತ್ತಷ್ಟು ಗಟ್ಟಿಗೊಳಿಸಲು ಸಾಕ್ಷಿಯಾಗಿದೆ. ಸಮಾರಂಭದ ವರ್ಣರಂಜಿತ ವರದಿಗಳ ಸಂಪೂರ್ಣ ಸಂಗ್ರಹವನ್ನು ಪತ್ರಿಕಾ ವಿಭಾಗದಲ್ಲಿ ಕಾಣಬಹುದು. ಕೊನೆಯಲ್ಲಿ ಕಲರ್ ಫುಲ್ ಭಾವಚಿತ್ರಗಳು ಹಾಗೂ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯ ಪ್ರತಿಯ ಮಾದರಿಯನ್ನು ಒಳಗೊಂಡಂತೆ ಒಟ್ಟಾರೆ ಇದು ಗುರುವಂದನೆ, ಸ್ನೇಹ ಸಮ್ಮಿಲನ ಮಾಡುವವರಿಗೆ ರೋಲ್ ಮಾಡೆಲ್ ಆಗಿದ್ದು ವಿಭಿನ್ನತೆಯ ಸಾರ್ಥಕತೆಗೆ ಸಾಕ್ಷಿಯಾಗಿದೆ.



– ಈಶ್ವರ ಕುರಿ, ಜಕ್ಕಲಿ.

## ಬಿಎಸ್‌ವೈ ಜನ್ಮದಿನದ ನಿಮಿತ್ತ ಶ್ರೀ ಸೋಮೇಶ್ವರನಿಗೆ ವಿಶೇಷ ಪೂಜೆ

# ಬಿಎಸ್‌ವೈ ಜನಪರ ಯೋಜನೆಗಳು ಜನಮನ ಗೆದ್ದಿವೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಇಂದು ದೇಶದಲ್ಲಿ ಬಿಜೆಪಿ ದೊಡ್ಡ ಪ್ರಮಾಣದಲ್ಲಿ ಬೆಳೆದು ನಿಂತಿದ್ದು, ಅದರಂತೆ ಕರ್ನಾಟದಲ್ಲಿ ಬಿಜೆಪಿ ಪಕ್ಷವನ್ನು ರಾಜ್ಯದಲ್ಲಿ ಕಟ್ಟಿ ಬೆಳೆಸಿದ ಕೀರ್ತಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ ಸಲ್ಲುತ್ತದೆ ಎಂದು ಬಿಜೆಪಿ ಶಿರಹಟ್ಟಿ ಮಂಡಲದ ಅಧ್ಯಕ್ಷ ಸುನೀಲ ಮಹಾಂತಶೆಟ್ಟರ ಹೇಳಿದರು

ಅವರು ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ಮಾಜಿ ಮುಖ್ಯಮಂತ್ರಿ ಬಿಎಸ್‌ವೈ ಅವರ ಜನ್ಮದಿನದ ಪ್ರಯುಕ್ತ ಹಾಗೂ ಶಾಸಕ ಡಾ. ಚಂದ್ರು ಲಮಾಣಿ ಲೋಕಾಯುಕ್ತ ಕೇಸ್‌ನಲ್ಲಿ ನಿರ್ದೋಷಿಯಾಗಿ ಬಿಡುಗಡೆ ಆಗಿ ಬರಲಿ ಎಂಬ ಉದ್ದೇಶದಿಂದ ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದರು.

ಬಿಜೆಪಿ ಪಕ್ಷವನ್ನು ಗ್ರಾಮೀಣ ಭಾಗದಿಂದ ಗಟ್ಟಿಯಾಗಿ ಬೆಳೆಸಿದ ಯಡಿಯೂರಪ್ಪನವರ ರಾಜ್ಯದ ಮುಖ್ಯಮಂತ್ರಿಯಾಗಿ ಅನೇಕ ಜನಪರ ಯೋಜನೆಗಳನ್ನು ತಂದಿದ್ದಾರೆ.


ಅವರ ಸೇವೆಯನ್ನು ಬಿಜೆಪಿ ಎಂದಿಗೂ ಮರೆಯಲು ಸಾಧ್ಯವಿಲ್ಲ. ಕುತಂತ್ರದಿಂದ ಲೋಕಾ ಬಲೆಗೆ ಸಿಲುಕಿರುವ ಶಾಸಕ ಡಾ. ಚಂದ್ರು ಲಮಾಣಿ ಅವರು ಆದಷ್ಟು ಶೀಘ್ರ ಲೋಕಾಯುಕ್ತ ಕೇಸ್‌ನಲ್ಲಿ ನಿರ್ದೋಷಿಯಾಗಿ ಹೊರಗೆ ಬಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಿ ಎಂದು ಹೇಳಿದರು.

ಯುವ ಮುಖಂಡ ನವೀನ ಹಿರೇಮಠ ಮಾತನಾಡಿದರು. ಈ ಸಂದರ್ಭದಲ್ಲಿ ಶಿರಹಟ್ಟಿ ಮಂಡಲ ಪ್ರಧಾನ ಕಾರ್ಯದರ್ಶಿ ಗಂಗಾಧರ ಮೆಣಸಿನಕಾಯಿ, ಥಾವರಪ್ಪ ಲಮಾಣಿ, ವಿಜಯಕುಮಾರ ಹತ್ತಿಕಾಳ, ಹಾಲಪ್ಪ ಸೂರಣಗಿ, ಬಾಬಣ್ಣ ವೇರ್ಣೇಕರ, ದುಂಡೇಶ ಕೊಟಗಿ, ಅನಿಲ ಮುಳಗುಂದ, ಡಿ.ವೈ. ಹುನಗುಂದ, ನೀಲಪ್ಪ ಹತ್ತಿ, ಪ್ರವೀಣ ಬೋಮಲೆ, ವಿಜಯ ಕುಂಬಾರ, ಬಸವರಾಜ ಕಲ್ಲೂರ, ಶಕ್ತಿ ಕತ್ತಿ, ಭೀಮಣ್ಣ ಯಂಗಾಡಿ, ಪ್ರವೀಣ ಪಾಟೀಲ, ರಾಮು ನಾಯಕ, ಉಳವೇಶಗೌಡ ಪಾಟೀಲ, ರಾಜಶೇಖರ ಶಿಗ್ಲಿಮಠ, ಮಹಾದೇವಪ್ಪ ಅಣ್ಣಿಗೇರಿ, ನಾಗನಗೌಡ ಪಾಟೀಲ್, ಮಂಜುನಾಥ ಬಸಾಪುರ, ರಮೇಶ ದನದಮನಿ, ವೀರೇಶ ಸಾಸಲವಾಡ, ಮಂಜುನಾಥ ಗಜಕೋಶ, ಹನುಮಂತ ಕೊಪ್ಪದ, ಭರತೇಶ ಪಾಟೀಲ, ಬಾಬಣ್ಣ ವಡಕಣ್ಣವರ, ಸತೀಶ ಕಾಡಣ್ಣವರ, ಆಕಾಶ ಸೌದತ್ತಿ, ವಿಶಾಲ ಬಟಗುರ್ಕಿ, ಸಂಗಮೇಶ ಬೆಳವಲಕೊಪ್ಪ ಸೇರಿದಂತೆ ನೂರಾರು ಕಾರ್ಯಕರ್ತರು, ಅಭಿಮಾನಿಗಳು ಹಾಜರಿದ್ದರು.

> ಜಿ.ಪಂ ಮಾಜಿ ಸದಸ್ಯ ಎಂ.ಎಸ್. ದೊಡ್ಡಗೌಡ್ರ ಮಾತನಾಡಿ, ಕರ್ನಾಟಕದಲ್ಲಿ ಬಿಜೆಪಿ ಪಕ್ಷಕ್ಕೆ ಯಡಿಯೂರಪ್ಪನವರ ಸೇವೆ ಅಪಾರವಾಗಿದೆ. ಅವರ ನೇತೃತ್ವದಲ್ಲಿ ಮುಂಬರುವ ದಿನಗಳಲ್ಲಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬರುತ್ತದೆ. ಬಿಜೆಪಿ ಪಕ್ಷದ ಉತ್ತಮ ಆಡಳಿತಗಾರನಾಗಿ ಅವರು ತಂದ ಯೋಜನೆಗಳು ಜನಪ್ರಿಯವಾಗಿವೆ ಎಂದು ಹೇಳಿದರು.

## ತಂಬ್ರಹಳ್ಳಿಯಲ್ಲಿ ಶ್ರೀ ಬಂಡೇ ರಂಗನಾಥೇಶ್ವರ ಸ್ವಾಮಿ ಉತ್ಸವ ಮೂರ್ತಿ ಬೆಟ್ಟಕ್ಕೆ ವೈಭವಯುತ ಕರೆದೊಯ್ಯುವಿಕೆ

# ಮಾ. 3ರಂದು ಭವ್ಯ ರಥೋತ್ಸವ, 4ರಂದು ಬೇಟೆಗಿಡ ಉತ್ಸವ



■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ತಾಲೂಕಿನ ತಂಬ್ರಹಳ್ಳಿಯ ಇತಿಹಾಸ ಪ್ರಸಿದ್ಧ ಶ್ರೀ ಬಂಡೇ ರಂಗನಾಥೇಶ್ವರ ಸ್ವಾಮಿ ದೇವಸ್ಥಾನ ಉತ್ಸವ ಮೂರ್ತಿಯನ್ನು ಬೆಟ್ಟಕ್ಕೆ ಕರೆದೊಯ್ಯುವ ಕಾರ್ಯಕ್ರಮ ಗುರುವಾರ ಸಂಜೆ ಭಕ್ತಿಭಾವ ಮತ್ತು ಸಂಭ್ರಮದಿಂದ ನೆರವೇರಿತು.

ಗ್ರಾಮದ ವಂಶಪಾರಂಪರ್ಯ ಧರ್ಮಕರ್ತರಾದ ಶ್ಯಾನುಬೋಗರ ಉದಯ ಭಾಸ್ಕರ್ ಅವರ ಮನೆಯಲ್ಲಿ ಇರಿಸಲ್ಪಟ್ಟಿದ್ದ ಶ್ರೀ ರಂಗನಾಥೇಶ್ವರ ಹಾಗೂ ಲಕ್ಷ್ಮೀ ದೇವಿಯ ಉತ್ಸವ ಮೂರ್ತಿಗಳಿಗೆ ಶಿವಾಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಭವ್ಯ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಸುಕ್ಷೇತ್ರ ನಂದಿಪುರ ಮಠದ ಡಾ. ಶ್ರೀ ಮಹೇಶ್ವರ ಸ್ವಾಮೀಜಿ ಹಾಗೂ ಗದ್ದಿಕೆರೆ ಚರಂತೇಶ್ವರ ಸ್ವಾಮೀಜಿಗಳ ನೇತೃತ್ವದಲ್ಲಿ ನೂರಾರು ಮಹಿಳೆಯರು ಕಳಸ ಹಿಡಿದು ಆರತಿ ಬೆಳಗಿದರು. ಸಮಾಳ ವಾದ್ಯಗಳ ನಾದದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ನಡೆದ ಮೆರವಣಿಗೆ ಭಕ್ತರ ಮನಸೆಳೆಯಿತು. ಮಹಿಳೆಯರು ಕಳಸ ಹೊತ್ತು ಮೆರವಣಿಗೆಗೆ ವಿಶೇಷ ಮೆರಗು ತಂದರು. ಎರಡೂ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಭಕ್ತರು ಪಾದಯಾತ್ರೆಯ ಮೂಲಕ ಬೆಟ್ಟವನ್ನು ಸೇರಿದರು.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿಯ ಗೌರವಾಧ್ಯಕ್ಷರಾದ ಡಾ. ಮಹೇಶ್ವರ ಸ್ವಾಮೀಜಿ ಮಾತನಾಡಿ, ಈ ಭಾಗದ ಆರಾಧ್ಯ ದೈವ ಶ್ರೀ ಬಂಡೇ ರಂಗನಾಥೇಶ್ವರ ಸ್ವಾಮಿಯ ರಥೋತ್ಸವವು ಪ್ರತಿವರ್ಷದಂತೆ ಪಾಲ್ಗುಣ ಮಾಸದ ಹೋಳಿ ಹುಣ್ಣಿಮೆಯಂದು, ಮಾರ್ಚ್ 3ರಂದು ಭವ್ಯವಾಗಿ ಜರುಗಲಿದ್ದು, ಮರುದಿನ ಮಾರ್ಚ್ 4ರಂದು ಬೇಟೆಗಿಡ ಉತ್ಸವ ನಡೆಯಲಿದೆ ಎಂದು ತಿಳಿಸಿದರು.

ಇಂದಿನಿಂದಲೇ ಬೆಟ್ಟದಲ್ಲಿ ನಾನಾ ಪೂಜೆ–ಕೈಂಕರ್ಯಗಳು ಹಾಗೂ ಕಲ್ಯಾಣೋತ್ಸವ ಕಾರ್ಯಕ್ರಮಗಳು ಪುರೋಹಿತರು ಮತ್ತು ಅರ್ಚಕರಿಂದ ಶಾಸ್ತ್ರೋಕ್ತವಾಗಿ ನೆರವೇರಲಿವೆ. ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತನು–ಮನ–ಧನ ಅರ್ಪಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಪ್ರಮುಖರು ಹಾಗೂ ದೇವಸ್ಥಾನ ಸಮಿತಿಯ ಪದಾಧಿಕಾರಿಗಳು, ಮಹಿಳೆಯರು, ಯುವಕರು ಮತ್ತು ಅನೇಕ ಭಕ್ತರು ಭಾಗವಹಿಸಿದ್ದರು.

## ಅಪರೂಪದ ಮಹಾ ಕಲಾವಿದ ಚಿಂತ್ರಪಳ್ಳಿ ತಳವಾರ ಕೊಟ್ರೇಶ್‌ಗೆ ಸನ್ಮಾನ

# "ಜೆಡಿಎಸ್ ಡಿಜಿಟಲ್ ಯೋಧ" ಗೌರವ

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ತಾಲೂಕಿನ ಚಿಂತ್ರಪಳ್ಳಿ ಗ್ರಾಮದ ಅಪರೂಪದ ಕಲಾವಿದ ತಳವಾರ ಕೊಟ್ರೇಶ್ ಅವರಿಗೆ "ಜೆಡಿಎಸ್ ಡಿಜಿಟಲ್ ಯೋಧ" ಎಂಬ ಗೌರವ ದೊರೆತಿದ್ದು, ಇದು ಕೇವಲ ಒಂದು ಪದವಿಯಲ್ಲ, ಅವರ ನಿರಂತರ ಸಮಾಜಸೇವೆಗೆ ಲಭಿಸಿದ ಮಾನ್ಯತೆ ಎಂಬ ಮಾತುಗಳು ಕೇಳಿ ಬಂದಿವೆ.

ಕಲೆಯ ಮೂಲಕ ಸಮಾಜ ಜಾಗೃತಿ, ಕೊರೋನಾ ಮಹಾಮಾರಿಯಂತಹ ಸಂಕಷ್ಟದ ಸಂದರ್ಭದಲ್ಲಿ ಜನರು ಭಯ ಮತ್ತು ಗೊಂದಲದಲ್ಲಿದ್ದಾಗ, ತಳವಾರ ಕೊಟ್ರೇಶ್ ಅವರು ಗೋಡೆ ಬರಹಗಳ ಮೂಲಕ ಜಾಗೃತಿ ಮೂಡಿಸಿ ಗಮನ ಸೆಳೆದಿದ್ದರು.


ಸರ್ಕಾರದ ಮಾರ್ಗಸೂಚಿಗಳು,



ಆರೋಗ್ಯ ಕ್ರಮಗಳು ಹಾಗೂ ಸಾಮಾಜಿಕ ಅಂತರದ ಮಹತ್ವವನ್ನು ಸರಳ ಮತ್ತು ಪರಿಣಾಮಕಾರಿ ಶೈಲಿಯಲ್ಲಿ ಜನರಿಗೆ ತಲುಪಿಸಿದರು. ಇದು ನಿಜವಾದ ಕಲಾವಿದನ ಸಾಮಾಜಿಕ ಹೊಣೆಗಾರಿಕೆಯನ್ನು ತೋರಿಸುತ್ತದೆ.

ಈ ಸಂದರ್ಭದಲ್ಲಿ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ. ನೇಮಿರಾಜ ನಾಯ್ಕ, ಜೆಡಿಎಸ್ ಜಿಲ್ಲಾ ಅಧ್ಯಕ್ಷರಾದ ಬಾದಾಮಿ ಮೃತ್ಯುಂಜಯ (ಮುತ್ತಣ್ಣ), ಜೆಡಿಎಸ್ ತಾಲೂಕ ಅಧ್ಯಕ್ಷರಾದ ವೈ. ಮಲ್ಲಿಕಾರ್ಜುನ್, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಚಿಂತ್ರಪಳ್ಳಿ ಗ್ರಾಮದ ಗುರುಹಿರಿಯರು ಮತ್ತು ಸ್ನೇಹಿತರು ಶುಭಾಶಯ ಕೋರಿ ಹಾರೈಸಿದರು.

ತಳವಾರ ಕೊಟ್ರೇಶ್ ಅವರ ಸೇವಾ ಪಯಣ ಇನ್ನಷ್ಟು ಯಶಸ್ವಿಯಾಗಲಿ ಎಂಬುದು ಜಿಲ್ಲೆಯ ಜನರ ಹಾರೈಕೆ.



### ಪರಿಸರ ಸಂರಕ್ಷಣೆಗೆ ಬದ್ಧತೆ

ಪರಿಸರ ಜಾಗೃತಿ ಕಾರ್ಯಕ್ರಮಗಳು, ಸ್ವಚ್ಛತಾ ಅಭಿಯಾನಗಳು ಮತ್ತು ಸಸಿ ನೆಡುವ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಕೊಟ್ರೇಶ್ ಅವರ ದೀರ್ಘದೃಷ್ಟಿ ಮತ್ತು ಜವಾಬ್ದಾರಿತನ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. "ಕಲೆ ಸಮಾಜಕ್ಕಾಗಿ" ಎಂಬ ತತ್ವವನ್ನು ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ.

### ಪಕ್ಷನಿಷ್ಠೆ ಮತ್ತು ಸಂಘಟನೆ ಸಾಮರ್ಥ್ಯ

"ಜೆಡಿಎಸ್ ಡಿಜಿಟಲ್ ಯೋಧ" ಗೌರವವು ಅವರ ಪಕ್ಷನಿಷ್ಠೆ ಹಾಗೂ ಸಂಘಟನಾ ಕಾರ್ಯಗಳಲ್ಲಿ ಸಕ್ರಿಯ ಪಾತ್ರವನ್ನು ಗುರುತಿಸಿದೆ. ಡಿಜಿಟಲ್ ವೇದಿಕೆಗಳ ಮೂಲಕ ಪಕ್ಷದ ಚಿಂತನೆಗಳನ್ನು ಜನರಿಗೆ ತಲುಪಿಸುವಲ್ಲಿ ಅವರು ಮುಂಚೂಣಿಯಲ್ಲಿದ್ದಾರೆ. ಸಂಘಟನಾ ಸಾಮರ್ಥ್ಯ ಮತ್ತು ತತ್ವನಿಷ್ಠೆ ಅವರ ಕಾರ್ಯಪದ್ಧತಿಯಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಸಹನೆ, ಶ್ರಮ ಮತ್ತು ಸಮಾಜಮುಖಿ ಚಿಂತನೆ

ಸಮಾಜಮುಖಿ ಕಾರ್ಯಗಳು ಸವಾಲಿನಿಂದ ಕೂಡಿರುತ್ತವೆ. ಟೀಕೆ ಮತ್ತು ಅಡೆತಡೆಗಳ ನಡುವೆಯೂ ಸಹನೆ ಕಾಪಾಡಿಕೊಂಡು ಶ್ರಮಪಟ್ಟು ಕೆಲಸ ಮಾಡುವ ಗುಣವೇ ಅವರ ಯಶಸ್ಸಿನ ಮೂಲ ಕಾರಣವಾಗಿದೆ. ವೈಯಕ್ತಿಕ ಲಾಭಕ್ಕಿಂತ ಸಮಾಜದ ಒಳಿತಿಗೆ ಆದ್ಯತೆ ನೀಡುವ ಅವರ ವ್ಯಕ್ತಿತ್ವವೇ ಅವರನ್ನು ವಿಶೇಷವಾಗಿಸಿದೆ.

# ಗ್ರಾಮೀಣರಿಗೆ ಆರೋಗ್ಯ ಸೇವೆ; ವೈದ್ಯರ ಪಾತ್ರ ಶ್ರೇಷ್ಠ – ಶಾಸಕ ಜಿ.ಎಸ್.ಪಾಟೀಲ

▶▶ಮೊದಲನೇ ಪುಟದಿಂದ

ಮಧುಮೇಹ ಪರೀಕ್ಷೆ ಸೇರಿದಂತೆ ವಿವಿಧ ಪ್ರಾಥಮಿಕ ಆರೋಗ್ಯ ಸೇವೆಗಳು ಗ್ರಾಮದಲ್ಲೇ ಲಭ್ಯವಾಗಲಿವೆ. ಗ್ರಾಮಸ್ಥರು ಆರೋಗ್ಯದ ಬಗ್ಗೆ ಹೆಚ್ಚಿನ ಜಾಗೃತಿ ಹೊಂದಿ, ಸರ್ಕಾರದ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

ಡಾ. ಬಿ.ಎಸ್. ಭಜಂತ್ರಿ ಮಾತನಾಡಿ, "ಪ್ರಾಮಾಣಿಕವಾಗಿ ಜನಸೇವೆ ಮಾಡುವುದು ನನ್ನ ಆಶಯ. ನಾನು ಸೇವೆ ಸಲ್ಲಿಸಿದ ಎಲ್ಲ ಕಡೆಗಳಲ್ಲಿ ರೋಗಿಗಳಿಗೆ ಕೈಲಾದಷ್ಟು ಉತ್ತಮ ಚಿಕಿತ್ಸೆ ನೀಡಿದ್ದೇನೆ. ಇಲ್ಲಿಯೂ ಉತ್ತಮ ಸೇವೆ ನೀಡಲು ಪ್ರಯತ್ನಿಸುತ್ತೇನೆ. ಯಾವುದೇ ಸಮಸ್ಯೆಗಳಿದ್ದರೂ ರೋಗಿಗಳು ನೇರವಾಗಿ ಸಂಪರ್ಕಿಸಬಹುದು" ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಕಂದಕೂರ, ಡಾ. ಕೆ.ಎ. ಹಾದಿಮನಿ, ಡಾ. ಚಿದಾನಂದ, ಪಡಿಯಪ್ಪ ಮಾದರ, ಶಿವರಾಜ ಘೋರ್ಪಡೆ, ಅಶೋಕ ಬಾಗಮಾರ, ವಿ.ಬಿ. ಸೋಮನಕಟ್ಟಿಮಠ, ಎಚ್.ಎಸ್. ಸೊಂಪೂರ, ಸುಭಾಸ್ ಮ್ಯಾಗೇರಿ, ಹನುಮಂತ ರಾಮಜಿ, ಕೊಟ್ರೇಶ್ ಹೂಗಾರ, ವೀರಯ್ಯ ಬಾಳಿಕಾಯಿಮಠ, ಪರಶುರಾಮ ಚಿಟಗಿ, ಬಾಲಚಂದ್ರ ವಾಲ್ಮೀಕಿ, ಶ್ರೀಧರ ಬಿದರಳ್ಳಿ, ನಾಗಯ್ಯ ಹಿರೇಮಠ, ಕುಮಾರ ರಾಠೋಡ, ರಾಜು ನದಾಫ್, ರಮೇಶ ರಾಮಜಿ, ರಾಚಯ್ಯ ಬಾಳಿಕಾಯಿಮಠ, ಚನ್ನವೀರಯ್ಯ ಪೂಜಾರ ಸೇರಿದಂತೆ ಆಶಾ ಕಾರ್ಯಕರ್ತೆಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ತಂದೆಯನ್ನೇ ಕೊಲೆಗೈದ ಮಗ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಗೋವನಾಳ ಗ್ರಾಮದಲ್ಲಿ ಮಗನೇ ತಂದೆಯನ್ನು ಕೊಲೆ ಮಾಡಿ ಪೊಲೀಸರಿಗೆ ಶರಣಾದ ಘಟನೆ ಶುಕ್ರವಾರ ರಾತ್ರಿ ನಡೆದಿದೆ.

ಶಂಕರಗೌಡ ಕುಬೇರಗೌಡ ದ್ಯಾವನಗೌಡ್ರ (60) ಕೊಲೆಗೀಡಾದ ದುರ್ದೈವಿಯಾಗಿದ್ದು, ಪ್ರಭು ಶಂಕರಗೌಡ ದ್ಯಾವನಗೌಡ್ರ (23) ಕೊಲೆಗೈದ ಪಾಪಿ ಮಗ ಎಂದು ತಿಳಿದುಬಂದಿದೆ.

ಪ್ರಾಥಮಿಕ ಮಾಹಿತಿಯನ್ವಯ ಇವರ 2 ಎಕರೆ ಜಮೀನನ್ನು ಲೀಸ್‌ಗೆ ಹಾಕಿದ ಹಣದ ವಿಚಾರವಾಗಿ ತಂದೆ-ಮಗನ ನಡುವೆ ಪರಸ್ಪರ ಜಗಳವಾಗಿದೆ. ಈ ವೇಳೆ ಮಗನಿಂದ ಹಲ್ಲೆಗೊಳಗಾದ ಶಂಕರಗೌಡ ಮೃತಪಟ್ಟಿರುತ್ತಾರೆ. ಕುಡಿದ ಮತ್ತಿನಲ್ಲಿ ತಂದೆ-ಮಗನ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ. ಮೃತ ವ್ಯಕ್ತಿಗೆ ಪತ್ನಿ, ಪ್ರಕರಣದ ಆರೋಪಿತ ಪುತ್ರ, ಓರ್ವ ಪುತ್ರಿ ಇದ್ದಾರೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ಡಿವೈಎಸ್‌ಪಿ ಮುರ್ತುಜಾ ಖಾದ್ರಿ, ಸಿಪಿಐ ಬಿ.ವೈ. ನ್ಯಾಮಗೌಡ್ರ, ಪಿಎಸ್‌ಐ ನಾಗರಾಜ ಗಡದ, ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ಮೃತನ ಪತ್ನಿ ಮಗನ ವಿರುದ್ಧ ದೂರು ದಾಖಲಿಸಿದ್ದಾರೆ. ಲಕ್ಷ್ಮೇಶ್ವರದಲ್ಲಿ ಭಾನುವಾರ ನಡೆಯಲಿರುವ ಗೆಳೆಯರ ಬಳಗದ ಮಧುರ-ಮಿಲನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದ ಶಂಕರಗೌಡನ ಬಗ್ಗೆ ಗೆಳೆಯರು ಕಂಬನಿ ಮಿಡಿದಿದ್ದಾರೆ.

## ಗುಡ್ಡದಪುರ ಶಾಲೆಯಲ್ಲಿ ಛಬ್ಬಿ ಕ್ಲಸ್ಟರ್ ಮಟ್ಟದ ಎಫ್‌ಎಲ್‌ಎನ್ ಕಲಿಕಾ ಹಬ್ಬ

# 'ಕಲಿಕಾ ಹಬ್ಬ' ಮಕ್ಕಳ ಕಲಿಕೆಗೆ ಪ್ರೇರಣೆ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪ್ರೇರಣೆ, ಸಂತಸದಾಯಕ ಕಲಿಕೆ ಮತ್ತು ಪ್ರತಿಭಾನ್ವೇಷಣೆಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ ಛಬ್ಬಿ ಕ್ಲಸ್ಟರ್ ಮಟ್ಟದ ಎಫ್‌ಎಲ್‌ಎನ್ ಕಲಿಕಾ ಹಬ್ಬವನ್ನು ಶಿರಹಟ್ಟಿ ತಾಲೂಕಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಗುಡ್ಡದಪುರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ನಾಣಕೀ ನಾಯ್ಕ, ಕಲಿಕಾ ಹಬ್ಬವು ಕಲಿಕಾ ನ್ಯೂನತೆ ಇರುವ ಮಕ್ಕಳಿಗೆ ಆಶಾದೀಪವಾಗಿದೆ. ಮಕ್ಕಳ ಕಲಿಕಾ ಪ್ರತಿಭೆಯನ್ನು ಹೊರತರುವ ಹಲವಾರು ಶೈಕ್ಷಣಿಕ ಚಟುವಟಿಕೆಗಳನ್ನು ಒಳಗೊಂಡಿರುವ ಈ ಹಬ್ಬ, ಮಕ್ಕಳಲ್ಲಿ ಕಲಿಕೆಯ ಪ್ರೇರಣೆ ಮತ್ತು ಬಲವರ್ಧನೆಗೆ ಉತ್ತಮ ವೇದಿಕೆಯಾಗುತ್ತದೆ ಎಂದರು.



ಜಿಲ್ಲಾ ಉಪ ನಿರ್ದೇಶಕರಾದ (ಅಭಿವೃದ್ಧಿ) ಜಿ.ಎಂ. ಮುಂದಿನಮನಿ ಮಾತನಾಡಿ, ಕಲಿಕಾ ಹಬ್ಬವು ಮಕ್ಕಳಲ್ಲಿ ಸಂತಸದಾಯಕ ಕಲಿಕೆಯನ್ನು ಉತ್ತೇಜಿಸುವ ಜೊತೆಗೆ ಅವರಲ್ಲಿರುವ ಅಡಗಿದ ಪ್ರತಿಭೆಯನ್ನು ಅನಾವರಣಗೊಳಿಸುತ್ತದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ಸರ್ಕಾರ ಎಫ್‌ಎಲ್‌ಎನ್ ಕಲಿಕಾ ಹಬ್ಬ ಎಂಬ ವಿನೂತನ ಕಾರ್ಯಕ್ರಮವನ್ನು ಜಾರಿಗೆ ತಂದಿದೆ ಎಂದು ಹೇಳಿದರು.

ಡಯಟ್ ಉಪನ್ಯಾಸಕರಾದ ಎಚ್.ಬಿ. ರಡ್ಡೇರ ಮಾತನಾಡಿ, ಪ್ರತಿಯೊಂದು ಮಗುವಿನಲ್ಲಿಯೂ ಕಲಿಕೆಯಲ್ಲಿ ವೈಯಕ್ತಿಕ ಭಿನ್ನತೆಗಳಿರುತ್ತವೆ. ಹಿಂದುಳಿದ ಮಕ್ಕಳಿಗೆ ಸಂತಸದಾಯಕ ಹಾಗೂ ಸೃಜನಾತ್ಮಕ ಚಟುವಟಿಕೆಗಳ ಮೂಲಕ ಕಲಿಕೆಯಲ್ಲಿ ಆಸಕ್ತಿ ಮೂಡಿಸುವ ಪರಿಕಲ್ಪನೆ ಈ ಕಾರ್ಯಕ್ರಮದ ಮುಖ್ಯ ಆಶಯವಾಗಿದೆ ಎಂದು ತಿಳಿಸಿದರು.

> ಕಲಿಕಾ ಹಬ್ಬದಲ್ಲಿ ವಿವಿಧ ಶೈಕ್ಷಣಿಕ ಸ್ಪರ್ಧೆಗಳು, ಸೃಜನಾತ್ಮಕ ಚಟುವಟಿಕೆಗಳು ಮತ್ತು ಕಲಿಕಾ ಪ್ರದರ್ಶನಗಳು ನಡೆಯಿತು. ಹಬ್ಬದ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚುವಂತೆ ಮಾಡಿ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಮುಖ್ಯ ಪ್ರವಾಹಕ್ಕೆ ತರುವ ಪ್ರಯತ್ನ ಗಮನಾರ್ಹವಾಗಿತ್ತು.

ಕಾರ್ಯಕ್ರಮದಲ್ಲಿ ಸಿಆರ್‌ಪಿ ಗೀತಾ ಸರವಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯಾಧಿಕಾರಿ ಬಿ.ಎಸ್. ಭಜಂತ್ರಿ, ಇಸಿಓ ಆರ್.ಬಿ. ಪವಾರ, ಎಸ್‌ಡಿಎಂಸಿ ಅಧ್ಯಕ್ಷರಾದ ಕೃಷ್ಣಪ್ಪ ಲಮಾಣಿ, ಸದಸ್ಯರಾದ ರೂಪಾ ಲಮಾಣಿ, ಶೇಖಪ್ಪ ಲಮಾಣಿ, ಶಿಕ್ಷಣ ಪ್ರೇಮಿಗಳಾದ ದೀಪಕ್ ಲಮಾಣಿ, ಲಕ್ಷ್ಮಣ ಲಮಾಣಿ, ತಿಪ್ಪಣ್ಣ ಲಮಾಣಿ, ಸಂಘದ ನಿರ್ದೇಶಕ ಮೋಹನ ಮಾಂಡ್ರೆ, ಬಿಆರ್‌ಪಿ ಬಿ.ಎಂ. ಯರಗುಪ್ಪಿ, ಛಬ್ಬಿ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಗೀತಾ ಸರವಿ, ಸಿಆರ್‌ಪಿ ಮಿತ್ರರಾದ ಆರ್. ಮಹಾಂತೇಶ, ಮುತ್ತು ಸಾವಿರಕುರಿ, ಉಮೇಶ್ ನೇಕಾರ, ಗಿರೀಶ್ ನೇಕಾರ, ಎನ್.ಎ. ಮುಲ್ಲಾ, ಕೆ.ಪಿ. ಕಂಬಳಿ, ಉಪ ಪ್ರಾಚಾರ್ಯ ಅರವಟಗಿ ಸೇರಿದಂತೆ ಛಬ್ಬಿ ಕ್ಲಸ್ಟರ್‌ನ ಶಾಲಾ ಮಕ್ಕಳು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

# ಗುರು ವಂದನಾ, ಸನ್ಮಾನ ಕಾರ್ಯಕ್ರಮ ಇಂದು

▸▸ಮೊದಲನೇ ಪುಟದಿಂದ

ಇದೀಗ 1988-89ನೇ ಸಾಲಿನ ಸ್ನೇಹಬಂಧನ@89 ಸ್ನೇಹಿತರ ತಂಡ ಮಾ. 1ರಂದು 9 ಗಂಟೆಗೆ ಜ. ರಂಭಾಪುರಿ ವೀರಗಂಗಾಧರ ಸಮುಧಾಯ ಭವನದಲ್ಲಿ ಗುರುವಂದನಾ ಕಾರ್ಯಕ್ರಮದ ಜೊತೆ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಶಾಸಕ ಜಿ.ಎಂ. ಮಹಾಂತಶೆಟ್ಟರ ವಹಿಸಲಿದ್ದು, ಕಾರ್ಯಕ್ರಮವನ್ನು ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ ಉದ್ಘಾಟಿಸಲಿದ್ದಾರೆ. ಶಾಲೆಯ ಸುಮಾರು 16 ನಿವೃತ್ತ ಶಿಕ್ಷಕರು ಹಾಗೂ 6 ಜನ ಬೋಧಕೇತರ ಸಿಬ್ಬಂದಿಗಳು ಪಾಲ್ಗೊಳ್ಳಲಿರುವದು ವಿಶೇಷವಾಗಿದ್ದು, ಕಾರ್ಯಕ್ರಮದಲ್ಲಿ ಅಗಲಿದ ಶಿಕ್ಷಕರಿಗೆ ಹಾಗೂ ಸ್ನೇಹಿತರಿಗೆ ಪುಷ್ಪ ನಮನಗಳನ್ನು ಅರ್ಪಿಸುವದರ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಗುವದು. ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಸ್ನೇಹಬಂಧನ@89 ಸ್ನೇಹಿತರು ತಿಳಿಸಿದ್ದಾರೆ.

# ರಾಜ್ಯ ಸರ್ಕಾರದ ಭಾಷಾ ಧೋರಣೆಗೆ ವಿರೋಧ: ಕರವೇ ಪ್ರತಿಭಟನೆ




■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರದ ಭಾಷಾ ನೀತಿಯನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೇಗೌಡ್ರ ಬಣ) ವತಿಯಿಂದ ಗದಗದಲ್ಲಿ ತೀವ್ರ ಪ್ರತಿಭಟನೆ ನಡೆಯಿತು. ಆರೋಗ್ಯ ಇಲಾಖೆಯ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಸಂಪೂರ್ಣವಾಗಿ ಉರ್ದು ಭಾಷೆಯಲ್ಲಿ ಮುದ್ರಿಸಿರುವುದನ್ನು ವಿರೋಧಿಸಿ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನು ತಕ್ಷಣ ಸಚಿವ ಸಂಪುಟದಿಂದ ಕೈಬಿಟ್ಟು ಸದಸ್ಯತ್ವ ರದ್ದುಪಡಿಸಬೇಕೆಂದು ಆಗ್ರಹಿಸಲಾಯಿತು.

ಟಾಂಗೂಕೂಟ್‌ನಲ್ಲಿ ಜಿಲ್ಲಾಧ್ಯಕ್ಷ ಎಂ.ಪಿ. ಪರ್ವತಗೌಡ್ರ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ ಕಾರ್ಯಕರ್ತರು ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಕೆಲಕಾಲ ವಾಹನ ಸವಾರರು ಸಂಕಷ್ಟ ಅನುಭವಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಮಂಜುನಾಥ ಪಿ. ಪರ್ವತಗೌಡ್ರ, ರಾಜ್ಯ ಸರ್ಕಾರ ಹಾಗೂ ಕೆಲವು ಸಚಿವರು ಮತ್ತು ಶಾಸಕರು ಪ್ರಮಾಣವಚನ ಸ್ವೀಕರಿಸುವಾಗ ತೆಗೆದುಕೊಂಡ ಪ್ರತಿಜ್ಞೆಯನ್ನು ಮರೆತಿದ್ದಾರೆ ಎಂದು ಆರೋಪಿಸಿದರು. ರಾಜಕೀಯ ಲಾಭ ಹಾಗೂ ಓಟ್ ಬ್ಯಾಂಕ್ ರಾಜಕಾರಣಕ್ಕಾಗಿ ಭಾಷೆ, ನೆಲ, ಜಲ ವಿಚಾರಗಳಲ್ಲಿ ದ್ರೋಹ ಮಾಡಲಾಗುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಗೌರವಾಧ್ಯಕ್ಷ ಗುರುರಾಜ ಕಲಕೇರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಮುಳ್ಳಾಳ, ಜಿಲ್ಲಾ ಸಂಚಾಲಕರಾದ ಪರಶುರಾಮ ಬನ್ನೂರ ಹಾಗೂ ಸುರೇಶ ಮುಳಗುಂದ, ಹಿರಿಯರಾದ ಮಲ್ಲಿಕಾರ್ಜುನ ಕಿರೆಸೂರ, ಯುವ ಘಟಕದ ಸಂಜೀವ ಬೆನಹಾಳ, ಶರಣಪ್ಪ ಬೆನಹಾಳ, ಅಕ್ಬರ್ ಅಲಿ ಬಿ ಇರಾನಿ, ಮಹಿಳಾ ಘಟಕದ ಪಾರ್ವತಿ ಪಾಟೀಲ್, ಕರಿಯಮ್ಮ ಹೊನ್ನಾನಾಯಕರ್, ಮಂಜುನಾಥ ಮಣ್ಣೂರ, ಶರಣಪ್ಪ ಅಡ್ನೂರ, ನಂದಪ್ಪ ಹಳ್ಳಿಕೇರಿ, ರಮೇಶ ಜಿನಗಿ, ಪರಪ್ಪ ಗಿಡಗಿ, ಅಶೋಕ, ನಜೀರ ನದಾಫ್, ಪಾರೂಕ ಅಲಿ, ಪರಶುರಾಮ ಪೂಜಾರ ಸೇರಿದಂತೆ ಅನೇಕ ಕಾರ್ಯಕರ್ತರು ಭಾಗವಹಿಸಿದ್ದರು.

# ಸ್ಕೂಲ್ ಚಂದನದಲ್ಲಿ ರಾಷ್ಟ್ರೀಯ ವಿಜ್ಞಾನ ದಿನ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಸ್ಕೂಲ್ ಚಂದನದಲ್ಲಿ ಭಾರತದ ಹೆಮ್ಮೆಯ ವಿಜ್ಞಾನಿ ಸರ್ ಸಿ.ವಿ. ರಾಮನ್‌ರವರ ಜನ್ಮದಿನದಂದು ಅವರ ಅಪೂರ್ವ ಸಾಧನೆಯ ನೆನಪಿನ ದಿನವಾಗಿ ಶನಿವಾರ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಯಿತು.

ಚಿಕ್ಕಟ್ಟಿ ಪಿಯು ವಿಜ್ಞಾನ ಕಾಲೇಜಿನ ಪ್ರೊ. ಎಸ್.ವಾಯ್. ಚಿಕ್ಕಟ್ಟಿ ಮಾತನಾಡಿ, ವಿಜ್ಞಾನಕ್ಕೆ ಜಾಗತಿಕ ಮನ್ನಣೆ ತಂದು-ಕೊಟ್ಟ ಸರ್ ಸಿ.ವಿ. ರಾಮನ್ ಅವರನ್ನು ಭಾರತ ಹೆಮ್ಮೆಯಿಂದ ಸ್ಮರಿಸುತ್ತದೆ. ವಿಜ್ಞಾನವು ನಮ್ಮ ವರ್ತಮಾನ ಮತ್ತು ಭವಿಷ್ಯವನ್ನು ರೂಪಿಸುವ ಪ್ರಬಲ ಕೊಡುಗೆಯಾಗಿದೆ. ಪ್ರೊ. ಸಿ.ವಿ. ರಾಮನ್ ಅವರ ಶಿಷ್ಯರಾದ ಭಾರತರತ್ನ ಪ್ರೊ. ಸಿ.ಎನ್.ಆರ್ ರಾವ್‌ರವರು ಸ್ಕೂಲ್ ಚಂದನದಲ್ಲಿ ವಿಜ್ಞಾನ ಕೇಂದ್ರ ಸ್ಥಾಪನೆ ಮಾಡಿ ವಿಜ್ಞಾನದ ಆಸಕ್ತಿ ಬೆಳೆಯಲು ಕಾರಣರಾಗಿದ್ದಾರೆ. ಪ್ರತಿ ವರ್ಷ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಜ್ಞಾನ ವಿಸ್ತೃತ ಕಾರ್ಯಕ್ರಮಗಳನ್ನು ಮಾಡಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುತ್ತಿರುವದು ಹೆಮ್ಮೆಯ ವಿಷಯವಾಗಿದೆ. ಚಂದನ ಶಾಲೆಯ ಮಕ್ಕಳಲ್ಲಿ ಇರುವ ವಿಜ್ಞಾನದ ಬಗೆಗಿನ ಆಸಕ್ತಿ ನೋಡಿ ಅಚ್ಚರಿ ಮತ್ತು ಹೆಮ್ಮೆ ಎನಿಸಿತು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಸಂಸ್ಥಾಪಕ ಟಿ. ಈಶ್ವರ ಮಾತನಾಡಿ, ವೈಜ್ಞಾನಿಕ ಮನೋಭಾವನೆಗಳನ್ನು ಪೋಷಿಸುವುದು, ಪ್ರಶ್ನಿಸುವುದು, ಪ್ರಯೋಗ ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಬೆಳೆಯುತ್ತದೆ. ಹೊಸ ಆವಿಷ್ಕಾರಗಳ ಮುಖಾಂತರ ರಾಷ್ಟ್ರ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೊಡುಗೆಯನ್ನು ನೀಡಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಾಂಶುಪಾಲ ಆರ್.ಜಿ. ಬಾವಾನವರ, ಶಿಕ್ಷಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು. ವಿದ್ಯಾರ್ಥಿಗಳಾದ ವೃಷ್ಟಿ, ಅಶ್ವಿನಿ, ಪ್ರಿಯಾಂಕ ಕಾರ್ಯಕ್ರಮ ನಿರ್ವಹಿಸಿದರು.



# ಹನುಮನ ನೆನೆದರೆ ಶನಿಯ ದೋಷವಿಲ್ಲ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಭಗವಾನ್ ಶ್ರೀ ರಾಮಚಂದ್ರನ ದೂತನಾಗಿರುವ ಹನುಮಂತನನ್ನು ನೆನೆದರೆ ಶನಿಯ ಶಾಪ ತಟ್ಟುವುದಿಲ್ಲ. ಆದ್ದರಿಂದ ಬಹುತೇಕರು ಶನಿವಾರದಂದು ಹನುಮಂತನಿಗೆ ನಡೆದುಕೊಳ್ಳುತ್ತಾರೆ ಎಂದು ನಿವೃತ್ತ ಮುಖ್ಯ ಶಿಕ್ಷಕ, ಸಾಹಿತಿ ಅರುಣ ಕುಲಕರ್ಣಿ ಹೇಳಿದರು.

ಪಟ್ಟಣದ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿ ನಡೆದ ಶ್ರೀ ಹನುಮಾನ್ ಚಾಲೀಸಾ ಪಠಣೆಯಲ್ಲಿ ಅವರು ಮಾತನಾಡಿದರು.

ಹನುಮಂತ ಅತ್ಯಂತ ಸಾಹಸವಂತ. ಅವನಲ್ಲಿನ ಶಕ್ತಿ ಏನೆಂಬುದು ಶ್ರೀರಾಮನಿಗೆ ಹೇಗೆ ಗೊತ್ತಿತ್ತೋ ಹಾಗೆಯೇ ಶನಿಗೂ ಕೂಡ.

ಆದ್ದರಿಂದ ಶನಿ ದೇವಾನುದೇವತೆಗಳನ್ನು, ಮಾನವರನ್ನು ಕಾಡಿದರೂ ಸಹ ಹನುಮಂತನನ್ನು ಮುಟ್ಟಲಿಲ್ಲ. ಹನುಮಂತನಲ್ಲಿನ ಅನೇಕ ಸುಗುಣಗಳನ್ನು ಕಂಡು ಶನಿ ದೇವರು ಅವನಿಗೆ ವರವನ್ನು ಕೊಟ್ಟರು ಎಂದು ಕುಲಕರ್ಣಿ ತಿಳಿಸಿದರು.

ಹನುಮಂತನಿಲ್ಲದ ಊರು ಇಲ್ಲವೇ ಇಲ್ಲವೆಂದರೂ ನಡೆಯುತ್ತದೆ. ಊರನ್ನು ಕಾಯುವ ಮಹಾದೇವನೆಂದೇ ಹನುಮಂತನನ್ನು ಎಲ್ಲರೂ ಪೂಜಿಸುತ್ತಾರೆ.

ಅದಕ್ಕಾಗಿ ನಾವು ಹನುಮಾನ್ ಚಾಲೀಸಾ ಪಠಣೆಯನ್ನು ನಿತ್ಯವೂ ಮಾಡಬೇಕೆಂದು ಕುಲಕರ್ಣಿ ಹೇಳಿದರು.

ಈ ವೇಳೆ ಅರ್ಚಕ ಶ್ರೀವಲ್ಲಭಭಟ್ಟ ಸದರಜೋಷಿ, ದತ್ತಭಕ್ತ ಮಂಡಳಿ ಅಧ್ಯಕ್ಷ ಡಾ. ನಾಗರಾಜ ಗ್ರಾಮಪುರೋಹಿತ, ಕಾರ್ಯದರ್ಶಿ ರಘುನಾಥ ಕೊಂಡಿ, ಎ.ಜಿ. ಕುಲಕರ್ಣಿ, ಅಜಿತ ಕುಲಕರ್ಣಿ, ಆನಂದ ಕಾಳೆ, ಬಿ.ಎಲ್. ಕುಲಕರ್ಣಿ, ಎಸ್.ಎಚ್. ಕುಲಕರ್ಣಿ, ರಂಗನಾಥ ಕುಲಕರ್ಣಿ, ಸನ್ಮತಿ ಸದರಜೋಷಿ, ನಿಖಿತಾ ಗ್ರಾಮಪುರೋಹಿತ, ರಾಜಶ್ರೀ ಕುಲಕರ್ಣಿ, ಪದ್ಮಾ ಕುಲಕರ್ಣಿ, ಶೋಭಾ ಸೂರಭಟ್ಟನವರ, ಜಯಶ್ರೀ ಗ್ರಾಮಪುರೋಹಿತ, ಅನಿತಾ ಗ್ರಾಮಪುರೋಹಿತ, ಪ್ರಿಯಾ ಕುಲಕರ್ಣಿ, ವಿದ್ಯಾ ಗ್ರಾಮಪುರೋಹಿತ, ಲಕ್ಷ್ಮಿ ಗ್ರಾಮಪುರೋಹಿತ, ರಮಾ ಕುಲಕರ್ಣಿ, ಸಂಧ್ಯಾ ಕುಲಕರ್ಣಿ, ಶೋಭಾ ಕುಲಕರ್ಣಿ, ರೇಣುಕಾ ಗ್ರಾಮಪುರೋಹಿತ, ವಿಮಲಾಬಾಯಿ ಗ್ರಾಮಪುರೋಹಿತ, ಜ್ಯೋತಿ ನಾಡಿಗೇರ ಮುಂತಾದವರಿದ್ದರು.

# ಮಾ. 11ರಿಂದ ಸರ್ಕಾರಿ ವೈದ್ಯಾಧಿಕಾರಿ-ನೌಕರರ ಅನಿರ್ದಿಷ್ಟಾವಧಿ ಮುಷ್ಕರ: ಮಲ್ಲಿಕಾರ್ಜುನ

▸▸ಮೊದಲನೇ ಪುಟದಿಂದ

ತುರ್ತು ಸೇವೆಗಳನ್ನೂ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಗೈರುಹಾಜರಾಗಿ ಮುಷ್ಕರ ಮುಂದುವರಿಸಲಾಗುವುದು ಎಂದು ಅವರು ಎಚ್ಚರಿಸಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಬಸವರಾಜ ಬಳ್ಳಾರಿ ಮಾತನಾಡಿ, ಆರೋಗ್ಯ ಇಲಾಖೆಯ ವೈದ್ಯಾಧಿಕಾರಿ ಹಾಗೂ ನೌಕರರ ಹೋರಾಟಕ್ಕೆ ಸಂಘದಿಂದ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ಘೋಷಿಸಿದರು. ಈ ಸಂದರ್ಭದಲ್ಲಿ ವೈದ್ಯಾಧಿಕಾರಿ ಸಂಘದ ಜಿಲ್ಲಾಧ್ಯಕ್ಷ ಡಾ. ಶರಣು ಗಾಣಿಗೇರ, ಮಲ್ಲಿಕಾರ್ಜುನ ಕಲಕಂಬಿ, ಡಾ. ಅರುಣಪ್ರಸಾದ, ಅಜಯಕುಮಾರ ಕಲಾಲ, ಡಾ. ಪ್ರಲ್ಹಾದ ಹೊಸಮನಿ, ರವಿ ಗುಂಜೀಕರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಸಚಿವ ಸಂತೋಷ ಲಾಡ್ ಜನ್ಮದಿನದ ಕಾರ್ಯಕ್ರಮ ಉದ್ಘಾಟಿಸಿದ ಅರುಣ ಕುಲಕರ್ಣಿ ನುಡಿ

# ಕಾಯಕವನ್ನು ಶ್ರದ್ಧೆ, ನಿಷ್ಠೆಯಿಂದ ಮಾಡಿ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮಾಡುವ ಕಾಯಕದಲ್ಲಿ ಸಣ್ಣದು, ದೊಡ್ಡದು ಎಂಬುದು ಯಾವುದೂ ಇಲ್ಲ. ಅದಕ್ಕೆಂದೇ ಬಸವಣ್ಣನವರು ಕಾಯಕವೇ ಕೈಲಾಸ ಎಂದು ಹೇಳಿದ್ದಾರೆ. ಮಾಡುವ ಕಾಯಕವನ್ನು ಶ್ರದ್ಧೆ, ನಿಷ್ಠೆಯಿಂದ ಮಾಡಿ ಎಂದು ನಿವೃತ್ತ ಮುಖ್ಯ ಶಿಕ್ಷಕ-ಸಾಹಿತಿ ಅರುಣ ಕುಲಕರ್ಣಿ ಹೇಳಿದರು.

ಪಟ್ಟಣದ ಗೃಹರಕ್ಷಕ ದಳದ ಕಚೇರಿಯಲ್ಲಿ ಆಚರಿಸಲಾದ ಸಚಿವ ಸಂತೋಷ ಲಾಡ್ ಅವರ 52ನೇ ಜನ್ಮದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಿಮ್ಮನ್ನು ನಂಬಿ ಮಾಲೀಕರು ನಿಮಗೆ ಕೆಲಸ ಕೊಟ್ಟಿರುತ್ತಾರೆ. ಆ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಬೇಕು. ಮಾಲೀಕನಿಗೆ 10 ರೂ. ಮೋಸ ಮಾಡುವ ವಿಚಾರ ಬಂದರೆ ನೀವು ಅವಿಚಾರಗೊಂಡಂತೆ. ಇಂದು ನಾನು ಉಣ್ಣುತ್ತಿರುವ ಅನ್ನ ನನ್ನ ಶ್ರಮದ ಬೆವರಿನ ಫಲ ಹೌದೋ ಅಲ್ಲವೋ ಎಂಬುದನ್ನು ನಿತ್ಯ ರಾತ್ರಿ ಮಲಗುವ ಮುಂಚೆ ಒಮ್ಮೆ ಯೋಚನೆ ಮಾಡಿ. ಹುಟ್ಟುಹಬ್ಬದ ಆಚರಣೆ ಹೇಗೆ ಮಾದರಿಯಾಗಿರಬೇಕು ಎಂಬುದನ್ನು ಸಂಜೀವಿನಿ ಜೀವರಕ್ಷಕ ಟ್ರಸ್ಟ್‌ನ ಗದಗ ಜಿಲ್ಲಾಧ್ಯಕ್ಷ ಶಿವಾನಂದ ಗೋಗೇರಿ ಮತ್ತು ಸಂಗಡಿಗರು ತೋರಿಸಿದ್ದಾರೆ ಎಂದರು. ಜಿಲ್ಲಾ ಕರವೇ ಅಧ್ಯಕ್ಷ ಹನುಮಂತ ಅಬ್ಬಿಗೇರಿ ಮಾತನಾಡಿ, ಸಚಿವ ಸಂತೋಷ ಲಾಡ್ ಸಚಿವ ಸಂಪುಟದಲ್ಲಿ ಕ್ರಿಯಾಶೀಲ ಸಚಿವರಾಗಿದ್ದಾರೆ.

> ಅಧ್ಯಕ್ಷತೆ ವಹಿಸಿದ್ದ ಶಿವಾನಂದ ಗೋಗೇರಿ ಮಾತನಾಡಿ, ಸಂಜೀವಿನಿ ಜೀವರಕ್ಷಕ ಟ್ರಸ್ಟ್ ಜನರ ಜೀವವನ್ನುಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಕನ್ನಡಿಗರು ಯಾರೇ ಆಪತ್ತಿನಲ್ಲಿದ್ದರೂ ಸಚಿವ ಸಂತೋಷ ಲಾಡ್ ಅವರಿಗೆ ರಕ್ಷಕರಾಗಿ ಎಂದಿಗೂ ನೆರವಾಗುತ್ತಾರೆ. ಈ ಟ್ರಸ್ಟ್ ವತಿಯಿಂದ ಅನೇಕ ಸಾಮಾಜಿಕ ಕಾರ್ಯಗಳು ನಡೆಯುತ್ತಿದ್ದು, ಅವುಗಳನ್ನು ಪಡೆದುಕೊಳ್ಳಬೇಕೆಂದರು.

ಜನಸಾಮಾನ್ಯರೊಂದಿಗೆ ಹೊಂದಿಕೊಂಡು ಹೋಗುವ ಲಾಡ್‌ರ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಿರುವುದು ಶ್ಲಾಘನೀಯ ಎಂದರು.

ಉಪನ್ಯಾಸಕ ನಾಗರಾಜ ಹೊನ್ನೂರ ಮಾತನಾಡಿ, ಕಾರ್ಮಿಕರಿಗೆ, ಕೃಷಿಕರಿಗೆ, ಶ್ರಮಿಕರಿಗೆ ಸನ್ಮಾನಿಸಿದ್ದು ಸ್ತುತ್ಯ. ಭೂಮಿಗೂ ಒಂದು ನಿಯಮವಿದೆ. ಅದನ್ನು ಪಾಲಿಸಿ. ರಾಸಾಯನಿಕ ಗೊಬ್ಬರ ಹಾಕಿ ಭೂಮಿಯನ್ನು ಬಂಜರು ಮಾಡಬೇಡಿ. ರೈತ ಎಂದಿಗೂ ಲಾಭದ ದೃಷ್ಟಿಯಿಂದ ವಿಷಯುಕ್ತ ಬೆಳೆಯನ್ನು ಬೆಳೆಯಬಾರದು. ಸಾವಯವ ಕೃಷಿಯನ್ನು ಮರೆತಿರುವ ನಾವುಗಳು ನಿತ್ಯವೂ ವಿಷವನ್ನುಣ್ಣುತ್ತಿದ್ದೇವೆ, ಇತರರಿಗೂ ನೀಡುತ್ತಿದ್ದೇವೆ. ಸತ್ವಯುತ ಆರೋಗ್ಯಕರ ಬೆಳೆಯನ್ನು ಬೆಳೆಯಲು ಸಾವಯುವ ಕೃಷಿಯನ್ನು ರೂಢಿಸಿಕೊಳ್ಳಿ ಎಂದರು. ಸಭೆಯನ್ನುದ್ದೇಶಿಸಿ ಗೃಹರಕ್ಷಕ ದಳದ ಮುಖ್ಯಸ್ಥ ಸುರೇಶ ಹಳ್ಳಿಕೇರಿ ಮಾತನಾಡಿದರು. ವೇದಿಕೆಯ ಮೇಲೆ ಭೋವಿ ಸಮಾಜದ ಅಧ್ಯಕ್ಷ ಪೋತರಾಜ ಮಣ್ಣೊಡ್ಡರ, ವೀರೇಶ ನೇಗಲಿ, ವೀರಪ್ಪ ಗೋದಿ, ಚಂದ್ರಾಮ ಗ್ರಾಮಪುರೋಹಿತ, ಈಶ್ವರ ಬೆಟಗೇರಿ, ಸಂಗಮೇಶ ಮೆಣಸಗಿ ಮತ್ತಿತರರಿದ್ದರು.

ಜಿಲ್ಲಾ ಕಾನಿಪ ಉಪಾಧ್ಯಕ್ಷ ಪ್ರಭುಸ್ವಾಮಿ ಅರವಟಗಿಮಠ, ಕಾರ್ಯಕಾರಿಣಿ ಮಂಡಳಿ ಸದಸ್ಯರಾದ ಆದರ್ಶ ಕುಲಕರ್ಣಿ, ನಿಂಗರಾಜ ಬೇವಿನಕಟ್ಟಿಯವರನ್ನು ಸನ್ಮಾನಿಸಲಾಯಿತು.

# ಜೆಡಿ(ಎಸ್) ವಿಜಯನಗರ ಜಿಲ್ಲಾ ಅಧ್ಯಕ್ಷರ ಪದಗ್ರಹಣ ಸಮಾರಂಭ ಇಂದು

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಜನತಾದಳ (ಜಾತ್ಯತೀತ) ಪಕ್ಷದ ವಿಜಯನಗರ ಜಿಲ್ಲಾ ಘಟಕದ ನೂತನ ಜಿಲ್ಲಾ ಅಧ್ಯಕ್ಷರ ಪದಗ್ರಹಣ ಹಾಗೂ ಅಧಿಕಾರ ಸ್ವೀಕಾರ ಸಮಾರಂಭವು ಮಾರ್ಚ್ 1, 2026ರ ಭಾನುವಾರ ಬೆಳಗ್ಗೆ 10:00 ಗಂಟೆಗೆ ಹಗರಿಬೊಮ್ಮನಹಳ್ಳಿಯ ಯು.ಕೆ. ಕೊಟ್ರಬಸಪ್ಪ ಬಯಲು ಜಾಗದಲ್ಲಿ ನಡೆಯಲಿದೆ.

ಪಕ್ಷದ ವಿಜಯನಗರ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಬಾದಾಮಿ ಮೃತ್ಯುಂಜಯ (ಮುತ್ತಣ್ಣ) ಅವರನ್ನು ನೇಮಕ ಮಾಡಲಾಗಿದ್ದು, ಅವರು ಇದೇ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಲಿದ್ದಾರೆ.

ಈ ಸಮಾರಂಭದಲ್ಲಿ ಜೆಡಿಎಸ್ ಪಕ್ಷದ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಹಾಗೂ ರಾಜ್ಯ ಮಟ್ಟದ ಪಕ್ಷದ ಪ್ರಮುಖ ಮುಖಂಡರು ಭಾಗವಹಿಸಲಿದ್ದಾರೆ. ಜೊತೆಗೆ ಹಗರಿಬೊಮ್ಮನಹಳ್ಳಿ ಕ್ಷೇತ್ರದ ಶಾಸಕರಾದ ಕೆ.ನೇಮಿರಾಜ್ ನಾಯ್ಕ, ಜಿಲ್ಲಾ ಹಾಗೂ ತಾಲೂಕು ಅಧ್ಯಕ್ಷರು, ವಿವಿಧ ಘಟಕಗಳ ಪದಾಧಿಕಾರಿಗಳು, ಹೋಬಳಿ ಮತ್ತು ಗ್ರಾಮ ಘಟಕಗಳ ಅಧ್ಯಕ್ಷರು ಹಾಗೂ ಕಾರ್ಯಕರ್ತರು ಸಹಸ್ರಾರು ಸಂಖ್ಯೆಯಲ್ಲಿ ಹಾಜರಾಗುವ ನಿರೀಕ್ಷೆಯಿದೆ. ಸಮಾರಂಭವನ್ನು ಯಶಸ್ವಿಗೊಳಿಸಲು ಪಕ್ಷದ ಕಾರ್ಯಕರ್ತರು ಸಕಲ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ ಎಂದು ನೂತನ ಜಿಲ್ಲಾ ಅಧ್ಯಕ್ಷ ಎಂ. ಮೃತ್ಯುಂಜಯ (ಮುತ್ತಣ್ಣ) ತಿಳಿಸಿದ್ದಾರೆ.



# ನಿಧನ

## ಅನಸೂಯಾ ಅಣ್ಣಿಗೇರಿಮಠ



**ನರೇಗಲ್:** ಪಟ್ಟಣದ ಮಾವಿನಕಾಯಿ ಓಣಿಯ ನಿವಾಸಿ, ಜಂಗಮ ಸಮಾಜದ ಹಿರಿಯರಾದ ಶ್ರೀಮತಿ ಅನಸೂಯಾ ವೀರಯ್ಯ ಅಣ್ಣಿಗೇರಿಮಠ(78) ಅವರು ಫೆ.28 ರಂದು ಶನಿವಾರ ನಿಧನರಾದರು.

ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದಾರೆ.

# ಪಿಯುಸಿ ಪರೀಕ್ಷಾರ್ಥಿಗಳಿಗೆ ಶುಭ ಕೋರಿದ ಡಾ. ಕಾಳೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣದ ಮೂರು ಪರೀಕ್ಷಾ ಕೇಂದ್ರಗಳಲ್ಲಿ ಶನಿವಾರದಿಂದ ಪಿಯುಸಿ ಪರೀಕ್ಷೆಗಳು ಪ್ರಾರಂಭಗೊಂಡವು. ಶ್ರೀ ಅನ್ನದಾನೇಶ್ವರ ಪಿಯು ಕಾಲೇಜ್, ಶ್ರೀ ಅಭಿನವ ಅನ್ನದಾನೇಶ್ವರ ಪಿಯು ಕಾಲೇಜ್ ಹಾಗೂ ಸರಕಾರಿ ಪಿಯು ಕಾಲೇಜ್ ಪರೀಕ್ಷಾ ಕೇಂದ್ರಗಳಲ್ಲಿ ಕನ್ನಡ ಪರೀಕ್ಷೆ ನಡೆಯಿತು.

ಶ್ರೀ ಅನ್ನದಾನೇಶ್ವರ ಹಾಗೂ ಶ್ರೀ ಅಭಿನವ ಅನ್ನದಾನೇಶ್ವರ ಪಿಯು ಕಾಲೇಜಿನ ಎಲ್ಲ ವಿದ್ಯಾರ್ಥಿಗಳಿಗೆ ಆಡಳಿತಾಧಿಕಾರಿ ಡಾ. ಜಿ.ಕೆ. ಕಾಳೆ ಸಿಹಿ ವಿತರಿಸಿ ಶುಭ ಕೋರಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯರಾದ ವೈ.ಸಿ. ಪಾಟೀಲ, ಅನಸೂಯಾ ಪಾಟೀಲ, ಉಪನ್ಯಾಸಕರಾದ ಎಫ್.ಎನ್. ಹುಡೇದ, ವಿದ್ಯಾಸಾಗರ, ನಂದೀಶ ಅಚ್ಚಿ, ರಮೇಶ ಕುಲಕರ್ಣಿ ಮುಂತಾದವರಿದ್ದರು.

ಪರೀಕ್ಷಾ ಕೇಂದ್ರಗಳಲ್ಲಿ ವೈ.ಜೆ. ಶಂಕರಯ್ಯ ಮುಖ್ಯ ಅಧೀಕ್ಷಕರಾಗಿ, ಎಂ.ಡಿ. ಪಾಟೀಲ ಸಹಮುಖ್ಯ ಅಧೀಕ್ಷರಾಗಿ, ಡಿ.ಎ. ತಹಸೀಲ್ದಾರ ಉತ್ತರ ಪತ್ರಿಕೆ ಪಾಲಕರಾಗಿ ಮತ್ತು ಆರ್.ಎಚ್. ಚವಡಿ ಕಛೇರಿ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸಿದರು.



## ಡಂಬಳ ಸರಕಾರ ಮಾದರಿ ಕೇಂದ್ರ ಶಾಲೆಯಲ್ಲಿ ಅದ್ದೂರಿಯಾಗಿ ಜರುಗಿದ ವಾರ್ಷಿಕೋತ್ಸವ

# ಪಾಲಕರು ಮಕ್ಕಳ ಕುರಿತು ಕಾಳಜಿ ವಹಿಸಿ



■ವಿಜಯಸಾಕ್ಷಿ ಸುದ್ದಿ, ಡಂಬಳ

ವಿದ್ಯಾರ್ಥಿಗಳು ಕೇವಲ ಪಠ್ಯ-ಪುಸ್ತಕಗಳಿಗೆ ಸೀಮಿತವಾಗದೆ ಕ್ರೀಡೆ, ಸಾಂಸ್ಕೃತಿಕ ಹಾಗೂ ನೈತಿಕ ಮೌಲ್ಯಗಳನ್ನೂ ಅಳವಡಿಸಿಕೊಳ್ಳಬೇಕು ಎಂದು ಸಿಆರ್‌ಪಿ ಮೃತ್ಯುಂಜಯ ಪೂಜಾರ ಹೇಳಿದರು.

ಡಂಬಳ ಗ್ರಾಮದ ಸರಕಾರ ಮಾದರಿ ಕೇಂದ್ರ ಶಾಲೆಯ ವಾರ್ಷಿಕೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ವಿದ್ಯಾರ್ಥಿಗಳ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರದ ಜೊತೆಗೆ ಅತ್ಯಂತ ಪ್ರಮುಖವಾಗಿ ಪಾಲಕರು ಮಕ್ಕಳ ಕುರಿತು ಕಾಳಜಿ ವಹಿಸುವುದು ಕೂಡ ಅಷ್ಟೇ ಮುಖ್ಯವಾಗಿದೆ ಎಂದರು.

ಹಿರಿಯ ಶಿಕ್ಷಕ ಎಮ್. ಎಮ್. ಬಂಡಿ ಮಾತನಾಡಿ, ವಿದ್ಯೆ ಮಾತ್ರವೇ ಜೀವನವನ್ನು ಉಜ್ವಲಗೊಳಿಸುವ ಏಕೈಕ ಶಕ್ತಿ ಎಂದು ಅಭಿಪ್ರಾಯಪಟ್ಟರು.

ಶಿಕ್ಷಕರಾದ ಮಹೇಶ ಕುಂಬಾರ ಶೈಕ್ಷಣಿಕ ವರ್ಷದುದ್ದಕ್ಕೂ ನಡೆದ ಶೈಕ್ಷಣಿಕ ಸಾಧನೆಗಳು, ಕ್ರೀಡಾ ಹಾಗೂ ಸಹಪಠ್ಯ ಚಟುವಟಿಕೆಗಳ ಕುರಿತು ವಾರ್ಷಿಕ ವರದಿ ಮಂಡಿಸಿದರು.

ವಿದ್ಯಾರ್ಥಿಗಳಿಂದ ದೇಶಭಕ್ತಿ ಗೀತೆ, ಜನಪದ ನೃತ್ಯ, ನಾಟಕ ಪ್ರದರ್ಶನ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ವಿದ್ಯಾರ್ಥಿಗಳ ನೃತ್ಯ ವಿಶೇಷ ಆಕರ್ಷಣೆಯಾಗಿತ್ತು. ಪಾಲಕರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಕ್ಕಳಿಗೆ ಉತ್ತೇಜನ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಡಿಎಮ್‌ಸಿ ಉಪಾಧ್ಯಕ್ಷೆ ಕಸ್ತೂರಿ ಗುರವಿನ, ಶಾಂತಯ್ಯ ಗುರುವಿನ, ಶೇಖರಯ್ಯ ಗುರುವಿನ, ಮಾರುತಿ ಕೊಳ್ಳಾರ, ಮಾರುತಿ ಹೊಂಬಳ, ಬಸುರಾಜ ಬೇವನಮರದ, ಮರಿಯಪ್ಪ ಸಿದ್ಧಣ್ಣವರ, ಮಾಜಿ ಸೈನಿಕ ವಾಸಪ್ಪ ಕಾಶಭೋವಿ, ನೀಲವ್ವ ಹೊಂಬಳ, ಕಸ್ತೂರಿ. ಗುರುವಿನ, ಕೌಸರ ಚಾಂದಖಾನವ, ಶಾಂತಮ್ಮ ಸಾಳೇರ, ಬಸವರಾಜ ಹಮ್ಮಗಿ, ಹನಮವ್ವ ಜಂತ್ರಿ, ಲಕ್ಷ್ಮವ್ವ ಮಾದರ, ಮಹೇಶ ರಾಯರಡ್ಡಿ, ದುರಗಪ್ಪ ಮಾದರ, ಶಕುಂತಲಾ ಪಲ್ಲೇದ, ಶಿವಮೂರ್ತಯ್ಯ ಅಮೋಘಮಠ, ಎಲ್.ಎಮ್. ಚಿಕ್ಕರಡ್ಡಿ, ಅಬ್ದುಲ ರಜಾಕ ತಾಂಬೋಟಿ, ಎಸ್. ಎಸ್. ಬಾರಕೇರ, ದೇವೇಂದ್ರಪ್ಪ ಗೌಡನ್ನವರ, ಶಾಂತಾ ಚ.ಗುಡ್ಡದ, ಜಿ.ಎನ್. ನೀರಲಗಿ, ಜಯಶ್ರೀ ದಂಡಿನ, ಯಲ್ಲಪ್ಪ ಚಲವಾದಿ ಶೋಭಾ ಶೇ.ಕರಿಗಾರ, ಹನಮಂತ ಮುರ್ಖಾನಿ, ಶಿಕ್ಷಕರಾದ ಜಿ.ಎನ್. ನೀರಲಗಿ, ಎಲ್.ವಿ. ಕಂಟಿಗೊಣ್ಣವರ, ಸುರೇಖಾ ಜಾಲಿಹಾಳ, ಕೆ.ವಾಯ್, ಬಡಿಗೇರ, ಎಸ್.ಕೆ. ಮಠದ, ನೀಲಮ್ಮ ಇಂಗಳಳ್ಳಿ, ಶರಣಪ್ಪ ಆನಿ, ಆನಂದ ಆರ್, ಲಕ್ಷ್ಮೀಬಾಯಿ ನಿಟ್ಟೂರ ಸೇರಿದಂತೆ ಗ್ರಾಮದ ಹಿರಿಯರು, ಮಹಿಳೆಯರು, ವಿದ್ಯಾರ್ಥಿಗಳು ಇದ್ದರು.

ಮುಖ್ಯೋಪಾಧ್ಯಾಯ ವಾಯ್.ಎಸ್. ಚಲವಾದಿ, ಎಸ್‌ಡಿಎಮ್‌ಸಿ ಅಧ್ಯಕ್ಷ ಸೋಮಪ್ಪ ತಳಗೇರಿ ಮಾತನಾಡಿ, ಜೀವನದಲ್ಲಿ ವಿದ್ಯೆ ಮತ್ತು ಸಂಸ್ಕಾರ ಮುಖ್ಯ. ಸಮಾಜದಲ್ಲಿ ಒಳ್ಳೆಯ ನಾಗರಿಕರಾಗಲು ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳೂ ಅಗತ್ಯವೆಂದು ಹೇಳಿದರು.

# ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಿರಿ



■ವಿಜಯಸಾಕ್ಷಿ ಸುದ್ದಿ, ಗದಗ

ಫೆ.28ರಿಂದ ಪ್ರಾರಂಭವಾಗಿರುವ 2025-2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯ ಸಂದರ್ಭದಲ್ಲಿ ಸನ್ಮಾರ್ಗ ಕಾಲೇಜಿನ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಿ ಅವರಲ್ಲಿ ಧೈರ್ಯ ತುಂಬಿ ಭಯ ಬದಿಗಿಟ್ಟು ಆತ್ಮವಿಶ್ವಾಸದ ಅಸ್ತ್ರದಿಂದ ಸವಾಲನ್ನು ಗೆದ್ದು ಬನ್ನಿ ಎಂದು ಸ್ಟುಡೆಂಟ್ಸ್ ಎಜ್ಯುಕೇಶನ್ ಸಂಸ್ಥೆಯ ಚೇರ್‌ಮನ್ ಪ್ರೋ. ರಾಜೇಶ ಕುಲಕರ್ಣಿ ಹಾರೈಸಿದರು.

ಪಾಲಕರ ನಿರೀಕ್ಷೆ ಮತ್ತು ನಿಮ್ಮ ಕನಸುಗಳನ್ನು ನನಸು ಮಾಡುವ ಛಲ ನಿಮ್ಮದಾಗಲಿ, ಯಶಸ್ಸು ತಾನೇ ಒಲಿಯುತ್ತದೆ ಎಂದು ಸಂಸ್ಥೆಯ ಆಡಳಿತಾಧಿಕಾರಿ ಎಮ್.ಸಿ. ಹಿರೇಮಠ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿದರು. ಸಂಸ್ಥೆಯ ನಿರ್ದೇಶಕರಾದ ಪ್ರೊ. ರೋಹಿತ್ ಒಡೆಯರ್, ಪ್ರೊ. ರಾಹುಲ್ ಒಡೆಯರ್, ಪ್ರೊ. ಪುನೀತ್ ದೇಶಪಾಂಡೆ, ಪ್ರೊ. ಸೈಯದ್ ಮತೀನ್ ಮುಲ್ಲಾ ಎಲ್ಲ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

# ಸಂದೀಪ್‌ಗೆ ಪಿಎಚ್‌ಡಿ ಪದವಿ

■ವಿಜಯಸಾಕ್ಷಿ ಸುದ್ದಿ, ಧಾರವಾಡ




ಮಹಿಳಾ ವಿ.ವಿ ಸಹಾಯಕ ಪ್ರಾಧ್ಯಾಪಕ ಸಂದೀಪ್ ಅವರು ಸಲ್ಲಿಸಿದ್ದ, 'ಕವರೇಜ್ ಆಫ್ ಸೈಬರ್ ಕ್ರೈಮ್: ಅ ಕಂಪಾರೇಟಿವ್, ಸ್ಟಡಿ ಅಮಂಗ್ ಕನ್ನಡ ಆಂಡ್ ಇಂಗ್ಲೀಷ್ ಡೈಲೀಸ್' ಕುರಿತ ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾನಿಲಯವು ಪಿಎಚ್‌ಡಿ ಪದವಿ ನೀಡಿದೆ.

ಸಂದೀಪ್ ಅವರು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರೊ. ಜೆ.ಎಂ. ಚಂದುನವರ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಉಡುಪಿಯವರಾದ ಸಂದೀಪ ಅವರು ವಿಜಯಪುರ ಮಹಿಳಾ ವಿ.ವಿಯ ಪತ್ರಿಕೋದ್ಯಮ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ




ನಗರದ ಮುಳಗುಂದ ನಾಕಾದ ಹತ್ತಿರವಿರುವ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರದಲ್ಲಿ ಮಾರ್ಚ್ 1ರಂದು ಸಾಯಂಕಾಲ 5 ಗಂಟೆಗೆ ಮಹಾ ರಥೋತ್ಸವ ಮತ್ತು ಪಲ್ಲಕ್ಕಿ ಉತ್ಸವ ಕಾರ್ಯಕ್ರಮಗಳು ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಸಂಘದ ಆಶ್ರಯದಲ್ಲಿ ನಡೆಯಲಿದೆ.

ಬೆಳಿಗ್ಗೆ ಶ್ರೀ ಜಗದ್ಗುರು ರೇಣುಕಾಚಾರ್ಯ ದೇವರಿಗೆ ಮಹಾ ರುದ್ರಾಭಿಷೇಕ, ಸಾಯಂಕಾಲ 5 ಗಂಟೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಮಹಾ ರಥೋತ್ಸವ ಹಾಗೂ ಪಾಲಿಕೆ, ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರ ಮೆರವಣಿಗೆಯು ಭಜನೆ, ಡೊಳ್ಳು ಹಾಗೂ ಸಕಲ ವಾದ್ಯ ವೈಭವದಿಂದ ನಡೆಯಲಿದೆ.

ರೇಣುಕ ಮಂದಿರದ ಶ್ರೀ ಚಂದ್ರಶೇಖರ ದೇವರು ನೇತೃತ್ವ ವಹಿಸಲಿದ್ದಾರೆ. ಕಾರಣ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಸಂಘದ ಸರ್ವ ಸದಸ್ಯರು ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯರ ಪರಮ ಭಕ್ತರು, ಪೀಠಾಭಿಮಾನಿಗಳು, ಸಕಲ ಸದ್ಭಕ್ತರು ರಥೋತ್ಸವ ಹಾಗೂ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪಾಶಿರ್ವಾದಕ್ಕೆ ಪಾತ್ರರಾಗಲು ಪ್ರಕಟಣೆ ಕೋರಿದೆ.

# ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವೃತ್ತಿ ಮಾರ್ಗದರ್ಶನ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಜಕ್ಕಲಿ ಗ್ರಾಮದ ಎಸ್‌ಎಜೆಡಿ ಸರಕಾರಿ ಪ್ರೌಢಶಾಲೆಯಲ್ಲಿ ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ಹಾಗೂ ಸಾವಯವ ಕೃಷಿ ಮಹತ್ವ ಕುರಿತು ಕಾರ್ಯಕ್ರಮ ನಡೆಯಿತು.

ಬಿ.ಆರ್.ಪಿ ಈಶ್ವರ ಕುರಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವೃತ್ತಿ ಮತ್ತು ಉನ್ನತ ಅಧ್ಯಯನದ ಆಯ್ಕೆಯನ್ನು ಮಾಡಿಕೊಂಡಾಗ ಮುಂದಿನ ಜೀವನ ರೂಪಿಸಿಕೊಳ್ಳಲು ಸಹಾಯಕವಾಗುತ್ತದೆ. ಎಸ್‌ಎಸ್‌ಎಲ್‌ಸಿ ನಂತರ ರಕ್ಷಣಾ ಕ್ಷೇತ್ರದಲ್ಲಿ, ನೇವಿ, ಏರ್‌ಫೋರ್ಸ್‌ಗಳಲ್ಲಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳು ಸೇರಿದಂತೆ ವಿವಿಧ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಹಾಗೂ ವೃತ್ತಿಪರ ಕೋರ್ಸ್‌ಗಳಲ್ಲಿ ಸಾಕಷ್ಟು ಅವಕಾಶಗಳಿದ್ದು, ನಿತ್ಯ ಪತ್ರಿಕೆಗಳನ್ನು ಓದುವ ಮೂಲಕ ಹೆಚ್ಚಿನ ವಿಷಯ ಅರಿಯಬೇಕು ಎಂದರು.

ಸಾವಯುವ ಕೃಷಿ ಬಗ್ಗೆ ಮಾತನಾಡಿದ ವೀರೇಶ ನೇಗಲಿ, ವಿದ್ಯಾರ್ಥಿಗಳು ಕೃಷಿಯೆಡೆಗೆ ಆಸಕ್ತಿ ಬೆಳಸಿಕೊಂಡು ಕೃಷಿಕರಾಗುವ ಬದಲು ಕೃಷಿ ವಿಜ್ಞಾನಿಗಳಾಗಿ ಮುಂದೆ ಬರಬೇಕು.

ಸಾವಯವ ಕೃಷಿ ಕುರಿತು ಪ್ರಾತ್ಯಕ್ಷಿಕೆ ಮೂಲಕ ಜೈವಿಕ ಗೊಬ್ಬರ ತಯಾರಿಕೆ, ಕೀಟ ಮತ್ತು ರೋಗ ನಿರ್ವಹಣೆ, ಮಾದರಿ ಪ್ರದರ್ಶಿಸಿದರು.

ಶಾಲೆಯ ಮುಖ್ಯೋಪಾಧ್ಯಾಯ ಬಿ.ಆರ್. ಗದುಗಿನ ಅಧ್ಯಕ್ಷತೆ ವಹಿಸಿದ್ದರು. ರೋಣ ತಾಲೂಕಿನ ವೃತ್ತಿ ಮಾರ್ಗದರ್ಶಕ ಮುದಿಯಪ್ಪ ಹುಡೇದ ವೃತ್ತಿ ಮೇಳ ಕುರಿತು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಗಜೇಂದ್ರಗಡ ತಾಲೂಕಾ ಕಾನಿಪ ಸಹ ಕಾರ್ಯದರ್ಶಿ ಸಂಗಮೇಶ ಮೆಣಸಿಗಿ ವೃತ್ತಿಮೇಳವನ್ನು ಉದ್ಘಾಟಿಸಿದರು.

ವೃತ್ತಿ ಮಾರ್ಗದರ್ಶಕ ನೋಡಲ್ ಅಧಿಕಾರಿ ಪ್ರಮೋದ ಹಿರೇಮಠ, ಶಿಕ್ಷಕ ಬಿ.ಎಸ್. ಜಗ್ಗಲ, ಆರ್.ಡಿ. ಬಡಿಗೇರ, ಶಿಕ್ಷಕಿ ಗೌರಮ್ಮ ಬಿಸನಳ್ಳಿ, ಅತಿಥಿ ಶಿಕ್ಷಕಿ ಸಾವಿತ್ರಿ ಸಂಗಟಿ ಉಪಸ್ಥಿತರಿದ್ದರು.

ಶಿಕ್ಷಕ ನೆಹರೂ ಮನೋಳಿ ಸ್ವಾಗತಿಸಿದರು. ವಿ.ವಿ. ಅಣ್ಣಿಗೇರಿ ನಿರೂಪಿಸಿದರು. ಮಂಜುನಾಥ ಹೂಗಾರ ವಂದಿಸಿದರು.




# ಕೋಮು ಸೌಹಾರ್ದತೆಯ ಹರಿಕಾರರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು!




■ವಿಜಯಸಾಕ್ಷಿ ಸುದ್ದಿ, ಗದಗ

ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಗುರುಬಸವ ಸಿಬಿಎಸ್‌ಈ ಶಾಲೆಯಲ್ಲಿ ತ್ರಿವಿಧ ದಾಸೋಹಿ, ಕನ್ನಡದ ಜಗದ್ಗುರುಗಳು, ಕೋಮು ಸೌಹಾರ್ದತೆಯ ಹರಿಕಾರರು ಹಾಗೂ ಜನಸಾಮಾನ್ಯರ ಸ್ವಾಮೀಜಿ ಎಂದೇ ಪ್ರಖ್ಯಾತರಾದ, ಭಾರತ ಸರ್ಕಾರದಿಂದ ರಾಷ್ಟ್ರೀಯ ಭಾವೈಕ್ಯತೆ ಹಾಗೂ ಏಕತಾ ಪ್ರಶಸ್ತಿ ಪುರಸ್ಕೃತರಾದ ಪೂಜ್ಯ ಲಿಂಗೈಕ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ 77ನೇ ಜಯಂತಿ ಹಾಗೂ ಭಾವೈಕ್ಯತಾ ದಿನಾಚರಣೆಯನ್ನು ಭಕ್ತಿಭಾವ ಶ್ರದ್ಧೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ಆರಂಭದಲ್ಲಿ ಪೂಜ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವ ನಮನ ಸಲ್ಲಿಸಲಾಯಿತು. ಶಾಲೆಯ ಪ್ರಾಚಾರ್ಯರಾದ ಡಾ. ವಿಜಯಕುಮಾರ್ ಮಾಲಗಿತ್ತಿಯವರು ಮಾತನಾಡಿ, ಶ್ರೀಗಳ ಸರಳತೆ, ನಿಸ್ವಾರ್ಥ ಸೇವೆ, ಧರ್ಮಸೌಹಾರ್ದ ಮತ್ತು ಸಮಾಜಮುಖಿ ಚಿಂತನೆಗಳು ಇಂದಿನ ಪೀಳಿಗೆಗೆ ಮಾದರಿಯಾಗಿದೆ ಎಂದು ಹೇಳಿದರು.

ಶಾಲೆಯ ಕನ್ನಡ ಶಿಕ್ಷಕರಾದ ಪ್ರಕಾಶ ಶಿವಶಿಂಪಿಗೇರ ಅವರು ಶ್ರೀಗಳ ಜೀವನ ಸಾಧನೆಗಳು, ಸಮಾಜ ಪರಿವರ್ತನೆಗಾಗಿ ನಡೆಸಿದ ಹೋರಾಟಗಳು ಹಾಗೂ ಭಾವೈಕ್ಯತೆಯ ಸಂದೇಶದ ಕುರಿತು ಸಾರ್ಥಕ ಉಪನ್ಯಾಸ ನೀಡಿದರು. ಶ್ರೀಮತಿ ದೀಪಾ ಉಪ್ಪಿನ ಅವರು ವಚನ ಗಾಯನದ ಮೂಲಕ ಸಭಿಕರ ಮನಸೆಳೆಯಿದರು.

ಸಮಾರಂಭದ ವಿಶೇಷ ಆಕರ್ಷಣೆಯಾಗಿ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು ಪೂಜ್ಯ ಶ್ರೀಗಳ ವೇಷಭೂಷಣ ಧರಿಸಿ ಸಾಕ್ಷಾತ್ ಶ್ರೀಗಳ ದರ್ಶನದ ಅನುಭವ ಮೂಡಿಸಿದರು.

ಈ ಸಂದರ್ಭದಲ್ಲಿ ದೈಹಿಕ ಶಿಕ್ಷಕರಾದ ವಿರೇಶ ಸೂಡಿ, ಕಲ್ಲಪ್ಪ ಅಂಗಡಿ, ಶಾಲಾ ಶೈಕ್ಷಣಿಕ ಸಲಹೆಗಾರರಾದ ಮಂಜುನಾಥ ಅಸುಂಡಿ ಸೇರಿದಂತೆ ಎಲ್ಲಾ ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಡಾ. ಸಂಗಮೇಶ ತಮ್ಮನಗೌಡ್ರರಿಗೆ

# 'ಕವಿ ಕಾವ್ಯ ವಿಭೂಷಣ' ರಾಷ್ಟ್ರೀಯ ಪ್ರಶಸ್ತಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಸಾಹಿತಿ ಡಾ. ಸಂಗಮೇಶ ತಮ್ಮನಗೌಡ್ರ ಅವರಿಗೆ ಕಾಸರಗೋಡು-ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ 'ಕವಿ ಕಾವ್ಯ ವಿಭೂಷಣ ರಾಷ್ಟ್ರೀಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು.

ವೃತ್ತಿಯಿಂದ ಶಿಕ್ಷಕರಾಗಿ, ಶಿರಹಟ್ಟಿ ತಾಲೂಕಿನ ಕಡಕೋಳದ ಕರ್ನಾಟಕ ಪಬ್ಲಿಕ್ ಸ್ಕೂಲ್ ಪ್ರಾಥಮಿಕ ವಿಭಾಗದ ಹಿರಿಯ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ತಮ್ಮನಗೌಡ್ರ ಅವರು 1989ರಿಂದ ಗ್ರಂಥಗಳನ್ನು ಪ್ರಕಟಿಸುತ್ತಿದ್ದು, ಇದುವರೆಗೆ 115 ಪುಸ್ತಕ ಬಿಡುಗಡೆಗೊಳಿಸಿದ್ದಾರೆ.

ವೇದಿಕೆಯಲ್ಲಿ ಸಮ್ಮೇಳನದ ಅಧ್ಯಕ್ಷರಾದ ನಾಡೋಜ ಡಾ. ಕೃಷ್ಣಪ್ರಸಾದ ಕೂಡ್ಲು, ಕಾಸರಗೋಡಿನ ಕನ್ನಡ ಭವನ ಮತ್ತು ಗ್ರಂಥಾಲಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ವಾಮನರಾವ ಬೇಕಲ್, ಪ್ರದೀಪ ಬೇಕಲ್, ಡಾ. ಕೆ.ಎನ್. ವೆಂಕಟರಮಣ ಹೊಳ್ಳ, ಡಾ. ಕೊಳಚಪ್ಪೆ ಗೋವಿಂದ ಭಟ್, ಪ್ರದೀಪಕುಮಾರ ಕಲ್ಕೂರ, ನಂ. ವಿಜಯಕುಮಾರ ಡಾ. ಸುರೇಶ ನೆಗಳಗುಳಿ, ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತಿ ಶ್ರೀಪಾಂದಗಳವರು ಶ್ರೀಮದ್ ಎಡನೀರು ಮಠಾಧೀಶರು, ಶ್ರೀ ಶಂಕರಾಚಾರ್ಯ ಸಂಸ್ಥಾನಮಠ ಕಾಸರಗೋಡು. ಡಾ. ಕೆ.ಜಿ. ವೆಂಕಟೇಶ, ಡಾ. ಬಾಲಕೃಷ್ಣ ಮದ್ದೋಡಿ. ಡಾ. ಸಂಗಮೇಶ ತಮ್ಮನಗೌಡ್ರ, ಇರಾ ನೇಮು ಪೂಜಾರಿ, ವಿಶಾಲಾಕ್ಷ ಪುತ್ರಕಳಾ, ಜಯಾನಂದ ಪೆರಾಜೆ, ಡಾ. ಶಾಂತಾ ಮತ್ತೂರ, ಸತ್ಯವತಿ ಭಟ್, ಕೊಳಚಪ್ಪು, ರತ್ನಾ ಗಿರೋಸಾ ಬದಿ, ಅಲ್ಲಾಸಾಬ ನದಾಫ, ಮಂಜುನಾಥ ಡೋಣಿ ಮುಂತಾದವರು ಪಾಲ್ಗೊಂಡಿದ್ದರು.

ಪ್ರಶಸ್ತಿ ವಿಜೇತ ಸಾಹಿತಿಗಳಿಗೆ ರಾಮಗಿರಿಯ ವರಕವಿ ಡಾ. ದ.ರಾ. ಬೇಂದ್ರೆ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯ ಕಾರ್ಯದರ್ಶಿ ಶಂಕ್ರಪ್ಪ ಶಿಳ್ಳಿನ, ಕಡಕೋಳದ ಕೆ.ಪಿ.ಎಸ್. ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಕನಕಮ್ಮ, ಕೆ.ಪಿ.ಎಸ್. ಪ್ರೌಢಶಾಲಾ ಉಪಪ್ರಾಚಾರ್ಯರಾದ ಎನ್.ವ್ಹಿ. ಮುಲ್ಕಿಗೌಡ್ರ ಮತ್ತು ಕೆ.ಪಿ.ಎಸ್ ಪ್ರಾಥಮಿಕ ಶಾಲಾ ವಿಭಾಗದ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ಲಕ್ಷ್ಮೇಶ್ವರ ತಾಲೂಕಿನ ಗೋವನಾಳದ ಪೂಜ್ಯ ಶ್ರೀ ರಮೇಶ ಮಹಾಸ್ವಾಮಿಗಳು ಪ್ರಶಸ್ತಿ ಪ್ರದಾನ ಮಾಡಿ ಮಾತನಾಡುತ್ತಾ, ಸಾಹಿತಿಗಳಾದ ಡಾ. ಸಂಗಮೇಶ ತಮ್ಮನಗೌಡ್ರ ಅವರು ನಮ್ಮ ಗದಗ ಜಿಲ್ಲೆಯ ಲಕ್ಷ್ಮೇಶ್ವರದ ನಿವಾಸಿಯಾಗಿರುವುದು ಹೆಮ್ಮೆಯ ವಿಷಯವಾಗಿದೆ. 115 ಕೃತಿಗಳನ್ನು ಬರೆದು ಪ್ರಕಟಿಸವುದು ಸಾಮಾನ್ಯ ಮಾತಲ್ಲ.

ಅಂತಹ ಸಾಹಸದ ಕೆಲಸಕ್ಕೆ ಅವರು ಕೈ ಹಾಕಿರುವುದು ಕನ್ನಡ ನಾಡು-ನುಡಿಯ ಅಭಿಮಾನದ ತುಡಿತವನ್ನು ಎತ್ತಿ ತೋರಿಸುತ್ತದೆ. ಅವರು ಸಾಹಿತ್ಯ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಮೌಲ್ಯಯುತ ಕೃತಿಗಳನ್ನು ಪ್ರಕಟಿಸಲಿ ಎಂದು ಶುಭ ನುಡಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka